



ಮೂಡುಗೋಡು ಹಿರಣ್ಯಪ್ಪ

MOODUGODU HIRANYAPPA

ಕರ್ನಾಟಕ ಲಲಿತಕಲಾ ಅಕಾಡೆಮಿ

KARNATAKA LALITHAKALA ACADEMY



ಶ್ರೀ ನಾ. ಡಿಸೋಜ

ನಾ. ಡಿಸೋಜ ಅವರು ೬-೬-೧೯೩೭ ರಂದು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಜನಿಸಿದರು. ಶಿವಮೊಗ್ಗದ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ (ಇಂದಿನ ಸಹ್ಯಾದ್ರಿ ಕಾಲೇಜು) ಇಂಟರ್ ಮೀಡಿಯಟ್‌ವರೆಗೆ ವಿದ್ಯಾಭ್ಯಾಸ ಮಾಡಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ವೃತ್ತಿಗೆ ಸೇರಿದರು. ಈಗ ಸಾಗರದಲ್ಲಿರುವ ನಾ. ಡಿಸೋಜ ಅವರು ಕನ್ನಡ ಜನಪ್ರಿಯ ಸಾಹಿತ್ಯಕ್ಕೆ ಘನತೆ ತಂದು ಕೊಟ್ಟ ಒಬ್ಬ ಪ್ರಮುಖ ಲೇಖಕರು. ಅವರ ಹಲವಾರು ಕಾದಂಬರಿಗಳು ಕನ್ನಡ ಪತ್ರಿಕೆಗಳ ಮೂಲಕ ಓದುಗರಿಗೆ ತಲುಪುತ್ತ ಸದಭಿರುಚಿ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಹೀಗೆ ಕನ್ನಡದ ಓದುಗರ ಅಭಿರುಚಿಯನ್ನು ಶ್ರೀಮಂತಗೊಳಿಸುತ್ತಿರುವ ನಾ. ಡಿಸೋಜ ಅವರು ತಮ್ಮ ಕೃತಿಗಳಿಗಾಗಿ ಸಾಹಿತ್ಯ ಮತ್ತು ಚಲನ ಚಿತ್ರರಂಗಗಳೆರಡರಲ್ಲೂ ಹಲವು ಗೌರವಗಳನ್ನು ಪಡೆದಿದ್ದಾರೆ. ಅನೇಕ ಕಾದಂಬರಿಗಳನ್ನೂ, ಮಕ್ಕಳ ಕೃತಿಗಳನ್ನೂ, ನಾಟಕಗಳನ್ನೂ ಕಥಾ ಸಂಕಲನಗಳನ್ನು ರಚಿಸಿರುವ ಡಿಸೋಜ ಅವರ ಹಲವು ಕೃತಿಗಳು ತೆಲುಗು, ತಮಿಳು, ಮಲೆಯಾಳಿ, ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ. ತಮ್ಮ ಕೃತಿಗಳ ಮೂಲಕ ಆಧುನಿಕ ಕನ್ನಡ ಕಥಾ ಸಾಹಿತ್ಯಕ್ಕೆ, ಸದಭಿರುಚಿ ನಿರ್ಮಿತಿಗೆ ಕೊಡುಗೆ ಕೊಟ್ಟಿರುವ ಇವರು ಮುಡುಗೋಡು ಹಿರಣ್ಯಪ್ಪನವರ ಬಗ್ಗೆ ಅಕಾಡೆಮಿಗೆ ಗ್ರಂಥವನ್ನು ರಚಿಸಿಕೊಟ್ಟಿದ್ದಾರೆ.

ಮೂಡುಗೋಡು ಹಿರಣ್ಯಪ್ಪ

MOODUGODU HIRANYAPPA

ನಾ. ಡಿಸೋಜ

ಕರ್ನಾಟಕ ಲಲಿತಕಲಾ ಅಕಾಡೆಮಿ.

ನೃಪತುಂಗ ರಸ್ತೆ, ಬೆಂಗಳೂರು - 560 002

MOODUGODU HIRANYAPPA. A biography by Naa D'souza published by K. Mukundan, Registrar, Karnataka Lalithakala Academy, Nrupatunga Road, Bangalore - 560 002.

First Impression: 1995.

Copies: 1000.

RS. 10.00.

English Translation by: M.L. Manjunath.

Chief Editor:

P.R. Thippeswamy.

Editorial Committe

V.T. Kale.

S. Dhanalakshmi.

Dr. B.K. Hiremath.

Raghupathibhat.

Y. HSugur.

Printed by

Rashmi Mudrana.
Sudhamanagar, Bangalore-560 027.

ಮೊದಲ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ರಾಜ್ಯದ ಹಿರಿಯ ಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿರುವುದು ಒಂದು ಈ ಪುಸ್ತಕಗಳು ಆ ಹೆಸರಾಂತ ಕಲಾವಿದರ, ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಕಲೆಯು ಬೆಳೆದು ಬಂದ ದಾರಿ ಮತ್ತು ಅವರ ಜೀವನ ಚರಿತ್ರೆಯ ತಿಳುವಳಿಕೆ ಉಂಟು ಮಾಡಲು ಸಹಾಯವಾಗಬಲ್ಲದು.

ಈ ಯೋಜನೆಯಲ್ಲಿ ಈಗಾಗಲೇ ಮೂವತ್ತಮೂರು ಸಚಿತ್ರ ಸುಂದರ ಹೊತ್ತಿಗೆಗಳು ಹೊರಬಂದಿವೆ. ಈಗ ಅಂದರೆ 1994-95ರ ಸಾಲಿನಲ್ಲಿ ಹಲವಾರು ಹೊತ್ತಿಗಗಳು ಹೊರಬಂದಿದ್ದು. ಇನ್ನೂ ಒಂದೆರಡು ಸಿದ್ಧವಾಗುತ್ತಲಿವೆ. ಈ ಮಾಲೆ ಅತ್ಯಂತ ಜನಪ್ರಿಯವಾಗಿದ್ದು, ಈಗಾಗಲೇ ಕೆಲವು ಪುಸ್ತಕಗಳು ಪುನರ್ ಮುದ್ರಣವಾಗಿಯವುದು, ಅವುಗಳ ಅವಶ್ಯಕತೆ, ಸಾರ್ಥಕತೆಗಳ ದ್ಯೋತಕ.

ಈ ಪುಸ್ತಕಗಳನ್ನು ರಚಿಸಲು ಆರಿಸಿರುವ ಬರಹಗಾರರು ಕಲೆಯ ವಿಷಯ ಮತ್ತು ಆಯಾ ಕಲಾವಿದರ ಜೀವನದ ಬಗ್ಗೆ ಅರಿತವರು. ಇವುಗಳಿಗೆ ಆರಿಸಿರುವ ಚಿತ್ರಗಳೂ, ಆಯಾ ಕಲಾವಿದರ, ಅವರ ಕಲಾ ವಿಲಾಸದ ಪ್ರತೀಕ. ಅವು ಆಯಾ ಕಲಾವಿದರ, ಅವರ ಕಾಲದ ಕಲಾ ಸಂಪತ್ತಿನ ವ್ಯಾಪ್ತಿಯನ್ನು ಅರಿಯಲು ಸಾಧಕವಾಗುವುದರಲ್ಲಿ ಸಂದೇಹವಿಲ್ಲ.

ಕಲಾವಿದರು, ಕಲಾ ರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

ಪಿ.ಆರ್. ತಿಪ್ಪೇಸ್ವಾಮಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು.

ಮುನ್ನುಡಿ

ಮೂಡುಗೋಡು ಗುಡಿಗಾರ ಹಿರಣ್ಯಪ್ಪನವರ ಬಗ್ಗೆ ನಾನು ಹಿಂದಿನಿಂದಲೂ ಕೇಳುತ್ತ ಬಂದವನು. ಅವರ ಕಲಾಕೃತಿಗಳನ್ನು ಹತ್ತಿರದಿಂದ ನೋಡಿದವನು. ಈ ಪ್ರದೇಶದವನೇ ಆದ ನಾನು ಅವರ ಬಗ್ಗೆ ಬರೆಯಬೇಕೆಂಬುದು ಕೂಡ ನನ್ನ ಬಹು ದಿನಗಳ ಆಸೆ. ಅದು ಈಗ ನೆರವೇರುತ್ತಿದೆ. ಈ ಕಾರ್ಯದಲ್ಲಿ ನನಗೆ ನೆರವು ನೀಡಿದ ಹಲವರನ್ನು ವಿಶೇಷವಾಗಿ ಪ್ರಖ್ಯಾತ ಕಲಾವಿದರಾದ ಶ್ರೀ. ಕೆ.ಜಿ. ಶಾಂತಪ್ಪ, ಜಡೆ ಮಂಜುನಾಥಪ್ಪ. ಮೂಡುಗೋಡು ಚಿಕ್ಕಣ್ಣಪ್ಪ, ಅಶೋಕ ಗುಡಿಗಾರ, ಶ್ರೀ. ಗಣಪತಿ ಕಾಕಡೆ, ಸೊರಬ ಇವರೆಲ್ಲರಿಗೆ ನಾನು ಕೃತಜ್ಞತೆ ಹೇಳಲೇಬೇಕು.

ಹಿರಣ್ಯಪ್ಪನವರ ಮೊಮ್ಮಗ ಶ್ರೀ. ಎಂ.ಜಿ. ಮೋಹನ, ಕಲಾ ಶಿಕ್ಷಕ, ಶಿವಮೊಗ್ಗ ಇವರು ತಮ್ಮ ಮನೆಯಲ್ಲಿದ್ದ ಕೆಲವು ಅಮೂಲ್ಯ ಪತ್ರಗಳನ್ನು ನನಗ ನೀಡಿ ಸಹಕರಿಸಿದ್ದಾರೆ. ಅವರಿಗೂ ನಾನು ಕೃತಜ್ಞ.

ಹಿರಣ್ಯಪ್ಪನವರು (1867-1943) 76 ವರ್ಷ ಬದುಕಿದವರು. ಅವರ ಸಾಧನೆ ಹಿರಿದು. ಆದರೆ ಕರ್ನಾಟಕದ ಕಲಾ ಪ್ರಪಂಚದಲ್ಲಿ ಅವರಿಗೆ ಸಿಗಬೇಕಾದ ಸ್ಥಾನ ಸಿಗಲಿಲ್ಲ ಎಂಬ ಕೊರಗು ನನ್ನದು. ಅವರು ಈಗ ದಂತ ಕತೆಯಾಗಿದ್ದಾರೆ. ಅವರ ಸುತ್ತ ಹಲವು ಐತಿಹ್ಯಗಳು ಹುಟ್ಟಿಕೊಂಡಿವೆ. ಆದರೆ ಅವರ ಕುರಿತಂತೆ ಸಿಗಬಹುದಾದ ಮಾಹಿತಿ ಸ್ವಲ್ಪವೆ. ಆ ಸಿಕ್ಕ ಮಾಹಿತಿಯನ್ನು ನಾನು ಬಳಸಿಕೊಂಡು ಈ ಕೃತಿಯನ್ನು ರಚಿಸಿದ್ದೇನೆ. ಹಿರಣ್ಯಪ್ಪನವರ ಕಲಾಕೃತಿಗಳ ಛಾಯಾ ಚಿತ್ರಗಳನ್ನು ಸಾಕಷ್ಟು ಸಂಗ್ರಹಿಸಿ ಕೊಡಲು ನನ್ನಿಂದ ಆಗದ ಬಗ್ಗೆ ವಿಷಾದಿಸುತ್ತೇನೆ. ಮೈಸೂರಿನ ಅರಮನೆಯಲ್ಲಿ ಇರುವ ಕೆಲ ಕಲಾಕೃತಿಗಳ ಛಾಯಾ ಚಿತ್ರಗಳನ್ನು ಪಡೆಯುವಲ್ಲಿ ಕೂಡ ನಾನು ಯಶಸ್ವಿಯಾಗಲಿಲ್ಲ. ಈ ಬಗ್ಗೆಯೂ ನನ್ನ ವಿಷಾದವಿದೆ.

ಹಿರಣ್ಯಪ್ಪನವರು ಮುಗಧ ವ್ಯಕ್ತಿ. ಅವರ ಅಂತಿಮ ದಿನಗಳಲ್ಲಿ ಅವರು ಕಳ್ಳ ನೋಟಿನ ವ್ಯವಹಾರದಲ್ಲಿ ಸಿಕ್ಕಿಬಿದ್ದಿದ್ದರು. ಅವರಿಂದ ಒಂದು ಸಣ್ಣ ನಕ್ಷೆಯನ್ನು ಬರೆಸಿಕೊಂಡು ಕೆಲವರು ಅದನ್ನು ನೋಟಿನ ಮುದ್ರಣದಲ್ಲಿ ಬಳಸಿಕೊಂಡು ಅವರಿಗೆ ಮೋಸ ಮಾಡಿದರು.ಇದರಿಂದಾಗಿ ಈ ಕಲಾವಿದ ತುಂಬಾ ನೊಂದುಕೊಂಡರು. ಈ

ವಿಷಯವನ್ನು ನಾನು ಪುಸ್ತಕದಲ್ಲಿ ಹೇಳಲು ಹೋಗಿಲ್ಲ. ಅದು ಅಪ್ರಸ್ತುತ ಎಂದೇ ನನ್ನ ನಂಬಿಕೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ಹಿರಿಯ ಕಲಾವಿದರು, ನನ್ನ ಮಿತ್ರರೂ ಆದ ಶ್ರೀ. ಪಿ.ಆರ್. ತಿಪ್ಪೆಸ್ವಾಮಿಯವರು ಈ ಕೃತಿ ಹೊರಬರಲು ಮುಖ್ಯ ಕಾರಣ ಅವರು ಹುರಿದುಂಬಿಸದೇ ಇದ್ದಿದ್ದರೆ ನಾನು ಈ ಪುಸ್ತಕವನ್ನು ಬರೆಯುತ್ತಲೇ ಇರಲಿಲ್ಲ. ಅಕಾಡೆಮಿಯಲ್ಲಿ ಗುಡಿಗಾರರಿಗೂ ಪ್ರಾತಿನಿಧ್ಯವನ್ನು ನೀಡಿದವರು ಅವರು. ಅವರಿಗೆ, ಅಕಾಡೆಮಿ ಸದಸ್ಯರಾದ ಸಾಗರದ ಶ್ರೀಧರ ಅವರಿಗೆ ಹಾಗೂ ಅಕಾಡೆಮಿ ರಿಜಿಸ್ಟ್ರಾರ್ ಅವರಿಗೆ ನಾನು ಕೃತಜ್ಞ.

ನನ್ನ ಕಿರಿಯ ಮಿತ್ರರಾದ ಶ್ರೀ. ಸತ್ಯನಾರಾಯಣ, ಬೆರಳಚ್ಚು ಪ್ರತಿ ಸಿದ್ಧಪಡಿಸಲು ನೆರವಾಗಿದ್ದಾರೆ. ಛಾಯಾಚಿತ್ರಗಾರರಾದ ಕೆ.ಜಿ. ಸೋಮಶೇಖರ್, ಮಿರಾಂಡ ಹನನುಮಂತಜೋಯ್ಸ ಇವರ ನೆರವನ್ನು ನಾನು ನೆನಪಿಗೆ ತಂದುಕೊಳ್ಳಬೇಕು. ಹಾಗೆಯೇ ಹೊಸಬಾಳೆ ಸೀತಾರಾಮರಾವ್, ಹೊಸಬಾಳೆ ಪುಟ್ಟಪ್ಪನವರ ಮಗ ನಾರಾಯಣರಾವ್, ಹೊಸಬಾಳೆ ಶ್ರೀ. ಟಿ.ವಿ.ಎಸ್. ಪ್ರಕಾಶ ಇವರಿಗೆ ನಾನು ಕೃತಜ್ಞ.

ನೆಹರು ನಗರ
ಸಾಗರ - 577401.

(ನಾ. ಡಿಸೋಜ)

ಗುಡಿಗಾರರು

ಕರ್ನಾಟಕದ ಖ್ಯಾತಿಗೆ ಶ್ರೀಗಂಧ-ದಂತದಲ್ಲಿ ವಿಗ್ರಹಗಳನ್ನು ಕೆತ್ತುವ ಗುಡಿಗಾರರು ಕೂಡ ಕಾರಣಕರ್ತರೆಂಬುದು ಯಾರೂ ಒಪ್ಪಿಕೊಳ್ಳಬೇಕಾದ ಸತ್ಯ. ಕರ್ನಾಟಕದಲ್ಲಿ ಕಿನ್ನಾಳ ಕಲೆಯಿಂದ ಬಿದರಿ ಕಲೆಯವರೆಗೆ ವೈವಿಧ್ಯಮಯವಾಗಿ, ನಾನಾ ಮಧ್ಯಮಗಳ ಮೂಲಕ ತಮ್ಮ ಕಲಾವಂತಿಕೆಯನ್ನು ತೋರಿಸುವ ಕಲಾವಿದರಿದ್ದಾರೆ. ಇವರಲ್ಲಿ ಗುಡಿಗಾರರೂ ಒಬ್ಬರು. ಆದರೆ ಏಕೋ ನಾವು ಗುಡಿಗಾರರನ್ನು ಕುಶಲಕರ್ಮಿಗಳೆಂದು ಒಪ್ಪಿಕೊಳ್ಳುತ್ತೇವಲ್ಲದೆ ಕಲಾವಿದರೆಂದಲ್ಲ. ಬಹುತೇಕವಾಗಿ ಶ್ರೀಗಂಧದಲ್ಲಿ ಒಂದೇ ಬಗೆಯ ವಿಗ್ರಹಗಳನ್ನು ಬೀಸಣಿಗೆಗಳನ್ನು, ಕರಂಡಕಗಳನ್ನು, ಬಗೆ ಬಗೆಯ ಫ್ಯಾನ್ಸಿ ವಸ್ತುಗಳನ್ನು ಮಾಡುವ ಗುಡಿಗಾರರಲ್ಲಿ ಸೃಜನಶೀಲತೆ ಇಲ್ಲ ಎಂಬ ಕಾರಣಕ್ಕಾಗಿ ನಾವು ಇವರನ್ನು ಕಲಾವಿದರೆಂದು ಪರಿಗಣಿಸುವುದಿಲ್ಲವೇನೋ ಎಂಬ ಅನುಮಾನವಿದೆ. ಆದರೆ ಗುಡಿಗಾರಲ್ಲೂ ಸೃಜನಶೀಲರಾದ ಕಲಾವಿದರು ಹಿಂದೆ ಇದ್ದರು. ಈಗಲೂ ಇದ್ದಾರೆ. ದಂತದಲ್ಲಿ, ಶಿಲೆಯಲ್ಲಿ ಉತ್ಕೃಷ್ಟವಾದ ಕಲಾಕೃತಿಗಳನ್ನು ರಚಿಸಿದ ಕಲಾವಿದರು ಗುಡಿಗಾರರಲ್ಲಿ ಆಗಿ ಹೋಗಿದ್ದಾರೆ. ಇವರಲ್ಲಿ ಹೆಸರಿಸಲೇ ಬೇಕಾದವರು ದಿವಂಗತ ಮೂಡುಗೋಡು ಹಿರಣ್ಯಪ್ಪನವರು.

ಗುಡಿಗಾರರು ಮೂಲತಃ ಗೋವಾದಿಂದ ಕರ್ನಾಟಕಕ್ಕೆ ಬಂದವರು. ಕರ್ನಾಟಕದ ಉತ್ತರ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ ಮಾತ್ರ ಈ ಹಿಂದೆ ವಾಸಿಸುತ್ತಿದ್ದ ಗುಡಿಗಾರರು ಈಗ ಬೆಂಗಳೂರು, ಮುಂಬಯಿ, ದೆಹಲಿಗಳಲ್ಲಿ ಕೂಡ ನೋಡಲು ಸಿಗುತ್ತಾರಾದರೂ ಇವರು ತಮ್ಮನ್ನು ಗುರುತಿಸಿಕೊಳ್ಳುವುದು ಚಂದಾವರ ಸೀಮೆ, ಸ್ವಾಧಿ ಸೀಮೆ, ಬಿಳಗಿ ಸೀಮೆಯವರೆಂದು, ಇಲ್ಲವೆ ನಗರ ಸೀಮೆ, ಸೊರಬ ಸೀಮೆಗಳವರೆಂದು. ಚಂದಾವರ, ಸ್ವಾದಿ, ಬಿಳಗಿ, ಉತ್ತರ ಕನ್ನಡ ಜಿಲ್ಲೆಯ ಊರುಗಳಾದರೆ ಸೊರಬ ಶಿವಮೊಗ್ಗ ಜಿಲ್ಲೆಯ ಊರುಗಳು.

ಕೊಂಕಣಿಯನ್ನು ಮಾತನಾಡುವ ಬಹುತೇಕ ಗುಡಿಗಾರರು ತಾವು ಗೋವಾಕ್ಕೆ ಉತ್ತರ ಭಾರತದಿಂದ ಮುಖ್ಯವಾಗಿ ಗೌಡ ದೇಶದಿಂದ ಬಂದುದಾಗಿ ಹೇಳುತ್ತಾರೆ. ಪೂರ್ವದಲ್ಲಿ ತಾವು ಕ್ಷತ್ರಿಯರಾಗಿದ್ದುದಾಗಿಯೂ, ಪರಶುರಾಮ, ಕ್ಷತ್ರಿಯರನ್ನು ಸಂಹಾರ ಮಾಡಲು

ಹೊರಟಾಗ ಅವರೆಲ್ಲ ಬೇರೆ ಬೇರೆ ವೃತ್ತಿಯ ಮೊರೆ ಹೊಕ್ಕು ಬದುಕಿಕೊಂಡತೆ, ತಾವ್ರ
ಮರದ ಕೆತ್ತನೆಯನ್ನು ಮಾಡತೊಡಗಿದ್ದಾಗಿಯೂ ಗುಡಿಗಾರರಲ್ಲಿ ಹಿರಿಯರಾದವರು
ಹೇಳುವುದುಂಟು.

ಗುಡಿಗಾರರು ಶ್ರೀಗಂಧವನ್ನು ಮಾತ್ರ ಬಳಸತೊಡಗಿದ್ದು ಇತ್ತೀಚಿಗೆ. ಹಿಂದೆ ಗುಡಿಗಾರರು
ಯಾವುದೇ ಮರದಲ್ಲಿ ಕಲಾತ್ಮಕ ವಸ್ತುಗಳನ್ನು ಮಾಡುತ್ತಿದ್ದರು. ಗ್ರಾಮ ಗ್ರಾಮಗಳಲ್ಲಿ
ಜನ ವರ್ಷಕ್ಕೊಮ್ಮೆ ಪೂಜಿಸಿ ಊರ ಹೊರಗೆ ಕೊಂಡೊಯ್ದು ಬಿಡುತ್ತಿದ್ದ ಮಾರ್ಡಿ,
ಗಡಿಮಾರಿ ವಿಗ್ರಹಗಳನ್ನು ಮಾಡುತ್ತಿದ್ದವರು ಗುಡಿಗಾರರೆ. ಮಣ್ಣಿನಲ್ಲಿ ವಿಗ್ರಹಗಳನ್ನು
ಕೂಡ ಇವರು ಮಾಡುತ್ತಿದ್ದರು, ಗುಡಿಗಳಿಗೆ ಬಣ್ಣ ಹಚ್ಚುವ ಕಾಯಕವೂ ಇವರದ್ದೆ.
ಇವರು ಹಿಂದೆ ಬಣ್ಣಗಾರರು, ರಥಕಾರರೆಂದು, ಕೂಟಕಾರರೆಂದು ಹೆಸರು ಪಡೆದಿದ್ದರು.
ಇವರಿಗೆ ಚಿತ್ರಕಾರರೆಂಬ ಹೆಸರೂ ಇದೆ. ಬೆಂಡಿನಲ್ಲೂ ಇವರು ಕೆಲ ವಸ್ತುಗಳನ್ನು
ರಚಿಸುತ್ತಾರೆ. ಗೋವಾದಲ್ಲಿ ಇಂದಿಗೂ ಉಳಿದಿರುವ ಕ್ರೈಸ್ತರ ಇಗರ್ಜಿಗಳಲ್ಲಿನ
ಅಪ್ಪೂ ಮರದ ಕೆಲಸಗಳನ್ನು ಗುಡಿಗಾರರೇ ಮಾಡಿದ್ದೆಂದು ಹೇಳಲಾಗಿದೆ. ಇಗರ್ಜಿಯ
ಭಾರೀ ಬಾಗಿಲುಗಳು, ದೇವರ ಪೀಠದಲ್ಲಿಯ ಕಂಬ, ಕಮಾನುಗಳು, ಪ್ರವಚನ
ವೇದಿಕೆ (ಪಲ್ ಪಿಟ್) ಮೊದಲಾದವುಗಳನ್ನು ಪೋರ್ಚುಗೀಸರು ವಿದೇಶೀ ಮಾದರಿಗಳ
ಆಧಾರದ ಮೇಲೆ ಇವರಿಂದ ಮಾಡಿಸಿರಬಹುದಾಗಿದೆ.

ಆದರೆ ಗೋವಾದ ಹಿಂದೂ ಜನ ಅಲ್ಲಿಯ ಪಾದ್ರಿಗಳ ಮತಾಂತರದ ಹಾವಳಿ,
ಕಿರುಕುಳ ಅತಿಯಾದಾಗ ಅಲ್ಲಿಂದ ನೆರೆಯ ಕರ್ನಾಟಕಕ್ಕೆ ಓಡಿ ಬಂದರೆಂಬುದು ಕೂಡ
ಇತಿಹಾಸ ಹೇಳುವ ಒಂದು ಸತ್ಯವೆ. ಗೌಡ ಸಾರಸ್ವತರ ಹಾಗೆ ಗುಡಿಗಾರರು ಕೂಡ
ಕರ್ನಾಟಕಕ್ಕೆ ಓಡಿ ಬಂದ ಸಧ್ಯತೆ ಇದೆ. ಹೀಗೆ ಈ ಜನ ಬಂದಾಗ ಉತ್ತರ ಕನ್ನಡ
ಜಿಲ್ಲೆಯಲ್ಲಿ ಬಿಳಗಿ, ಸ್ವಾದಿ, ದೊರೆಗಳು, ಶಿವಮೊಗ್ಗ ಜಿಲ್ಲೆಯಲ್ಲಿ ನಗರದ ದೊರೆಗಳ
ಆಶ್ರಯ ಸಿಕ್ಕಿದ್ದರಲ್ಲಿ ಏನೂ ಅಚ್ಚರಿ ಇಲ್ಲ.

ಬಿಳಗಿ, ಸ್ವಾದಿ ನಗರದ ದೊರೆಗಳು ಗುಡಿಗಾರರ ಮೂಲಕ ಸಾಕಷ್ಟು ಕೆಲಸಗಳನ್ನು
ಮಾಡಿಸಿಕೊಂಡಿರಬಹುದು. ಆದರೆ ಶತಮಾನಗಳ ನಂತರವೂ ಇಂತಹ ಕೆಲಸಗಳು
ಉಳಿಯುವುದು ಕಷ್ಟಸಾಧ್ಯವಾದ್ದರಿಂದ ಗುಡಿಗಾರರ ಕೆಲಸವನ್ನು ಗುರುತಿಸುವುದು
ಅಸಾಧ್ಯವೆ. ಆದರೆ ಶಿವಮೊಗ್ಗ ಜಿಲ್ಲೆಯ ಕೆಳದಿ, ತೋಗರ್ಸಿಯಲ್ಲಿರುವ ಎರಡು
ದೇವಾಲಯಗಳು ಪೂರ್ಣವಾಗಿ ಮರದ ಕೆತ್ತನೆಗಳನ್ನೇ ಹೊಂದಿದ್ದು ಗುಡಿಗಾರರ

ಕೈಚಳಕವನ್ನು ಇಲ್ಲಿ ಕಾಣಬಹುದಾಗಿದೆ. ಕೆಳದಿಯ ಅಮ್ಮನವರ ದೇವಾಲಯದ ಇಡೀ ಭುವನೇಶ್ವರಿ ದೇವ ದೇವತೆಗಳ ಕೆತ್ತನೆಯಿಂದ ಕೂಡಿದ್ದಾಗಿದೆ. ರಕ್ತಚಂದನದಲ್ಲಿ ಕೆತ್ತಲಾದ ಈ ವಿಗ್ರಹಗಳ ಶೈಲಿ ಇಂದು ಬೇರೆಡೆ ನೋಡಲು ಸಿಗುವುದಿಲ್ಲ.

ಕ್ರಮೇಣ ದೊರೆಗಳು, ನಾಯಕರು ಅವಸಾನ ಹೊಂದಿದ ನಂತರ ಗುಡಿಗಾರರು ಶ್ರೀಮಂತರನ್ನು ಆಶ್ರಯಿಸಿದರೆಂದು ಕಾಣುತ್ತದೆ. ಬೆಂಡಿನಲ್ಲಿ ಬಾಸಿಂಗಗಳನ್ನು ಮಾಡುವ, ಮರದ ಕೆಲಸ ಮಾಡುವ ದಂತದ ವಿಗ್ರಹ ಮಾಡುವ ಕೆಲಸವಂತೂ ಇವರ ಪಾಲಿಗೆ ಇದ್ದೇ ಇರುತ್ತಿತ್ತು.

ಮೂಡುಗೋಡು

ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ ತಾಲ್ಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯ ಗುಡಿಗಾರರು ಇದ್ದಾರೆ. ಸೊರಬ ಮಲೆನಾಡಿನ ಸೆರಗು. ಸಣ್ಣಸಣ್ಣ ಹಳ್ಳಿಗಳು. ಮಲೆನಾಡಿನ ಹಳ್ಳಿಗಳೆಂದರೆ ಒಂದೋ ಎರಡೋ ಮನೆಗಳು. ಹೊಸಬಾಳೆ, ಸೊರಬ ತಾಲ್ಲೂಕಿನ ಒಂದು ಗ್ರಾಮ. ಹೊಸಬಾಳೆಯಿಂದ ಮೂರು ಮೈಲಿ ದೂರದ ಕೊಂಚ ದೊಡ್ಡದೆನ್ನಬಹುದಾದ ಹಳ್ಳಿ, ಮೂಡುಗೋಡು. ಏಳೆಂಟು ಮನೆಗಳು, ಸುತ್ತ ದಟ್ಟಕಾಡು. ಒಂದು ಕೆರೆ. ಕಾಡಿನ ನಡುವೆ ಅಲ್ಲಲ್ಲಿ ಹೊಲಗಳು. ಏಳೆಂಟು ಮನೆಗಳಲ್ಲಿ ಒಂದು ಶ್ರೀಮಂತ ಗೌಡರದ್ದು, ಒಂದು ಗುಡಿಗಾರ ಪುಟ್ಟಪ್ಪನವರದ್ದು. ಉಳಿದವೆಲ್ಲ ದೀವರ ಮನೆಗಳು.

ಪುಟ್ಟಪ್ಪನವರು ಸಾಕಷ್ಟು ಅನುಕೂಲಸ್ಥರೆ. ಮೂಡುಗೋಡಿಗೆ ಅನತಿ ದೂರದಲ್ಲಿದ್ದ ಇರಾಣಪುರದಲ್ಲಿ ಹದಿನೆಂಟು ಎಕರೆ ಜಮೀನು ಇತ್ತು. ಅವರಿಗೆ ಓರ್ವ ರೈತ ಇದನ್ನು ನೋಡಿಕೊಂಡು ವರ್ಷಕ್ಕೆ ಇಷ್ಟು ಎಂದು ಭತ್ತ ತಂದು ಹಾಕುತ್ತಿದ್ದ. ಪುಟ್ಟಪ್ಪನವರ ಮನೆ ಕೂಡ ದೊಡ್ಡದೆ. ಹದಿನೆಂಟು ''ಅಂಕಣದ'' ಭಾವಂತಿ ಮನೆ. ಮನೆಯ ಒಳಗೇನೆ ದೊಡ್ಡ ಹಣತ. ಕೊಟ್ಟಿಗೆಯಲ್ಲಿ ದನಕರುಗಳು, ಮೇಲೆ ಹೊದಿಸಿದ ಊರ ಹೆಂಚು.

ಪುಟ್ಟಪ್ಪ ಎಲ್ಲ ಕೆಲಸ ಬಲ್ಲವರು. ಗಂಧ, ದಂತದ ಕೆತ್ತನೆ ಹೇಗೂ ಗೊತ್ತಿತ್ತು. ಜೊತೆಗೆ ಎರಕದ ಕೆಲಸ. ಚಿನ್ನ, ಬೆಳ್ಳಿ ಕೆಲಸವನ್ನೂ ಮಾಡಬಲ್ಲವರಾಗಿದ್ದರು. ತೇಗ, ಬೀಟೆ ಮರದಲ್ಲಿ ಆಭರಣದ ಪೆಟ್ಟಿಗೆ ಸಂದೂಕ ಮಾಡುವುದರಲ್ಲಿ ಎತ್ತಿದ ಕೈ. ಕೆತ್ತನೆ ಕೆಲಸಕ್ಕೆ ಬೇಕಾದ ಕಬ್ಬಿಣದ ಚೀರ್ಣಗಳನ್ನು ಕೂಡ ಇವರೇ ಮಾಡಿ ಕೊಳ್ಳುತ್ತಿದ್ದರು.

ಮೂಡುಗೋಡು ಮನೆ, ಸಾಗರ ಸೊರಬದವರು ಮಾತ್ರವಲ್ಲ ಆ ಕಡೆ ಬನವಾಸಿ, ಸಿದ್ದಾಪುರ, ಶಿರಸಿಯಲ್ಲಿರುವ ಎಲ್ಲ ಗುಡಿಗಾರರಿಗೂ ತಪ್ಪದೇ ಬಂದ ಒಂದೆರಡು ದಿನವಿದ್ದು ಹೋಗುವಂತಹ ಸ್ಥಳ. ಸೊರಬದ ಮೂಲಕ ಹೋಗುವ ಎತ್ತಿನ ಗಾಡಿಯಲ್ಲಿ ಜನ ಹೊಸಬಾಳೆಯ ಬಳಿ ಇಳಿದು ನಡೆದುಕೊಂಡು ಮೂಡುಗೋಡಿಗೆ ಬಂದರೆ ಅಲ್ಲಿ ಅವರಿಗೆ ಉತ್ತಮ ಆತಿಥ್ಯ.

ನವರಾತ್ರಿ ಬಂತೆಂದರೆ ಅಷ್ಟು ದಿನ ಇಲ್ಲಿ ಹಬ್ಬ. ಮನೆ ದೇವರು ದೇವಿ ಚಾಮುಂಡೇಶ್ವರಿ. ಆಯುಧ್ಧ ಪೂಜೆ ಇತ್ಯಾದಿ ಶಾಸ್ತ್ರೋಕ್ತವಾಗಿ ಆಗುತ್ತಿತ್ತು. ಪುಟ್ಟಪ್ಪನವರು ದೈವ ಭಕ್ತರು. ಅವರೇ ಪೂಜೆ ಮಾಡಬೇಕು. ಅದು ಬಾರಿಸಿ ಗಂಟೆ ಆರತಿ ಎತ್ತಿ ಮಾಡುವ ಕಾಟಾಚಾರದ ಪೂಜೆಯಲ್ಲ. ಕಡಿಮೆ ಎಂದರೆ ಒಂದು ಗಂಟೆಯನ್ನು ಅವರು ಪೂಜೆಗೆ ತೆಗೆದುಕೊಳ್ಳುತ್ತಿದ್ದರು.

ಇವರ ಹೆಂಡತಿ ಲಕ್ಷ್ಮಮ್ಮ. ಪುಟ್ಟಪ್ಪನವರಿಗೆ ಓರ್ವ ಮಗ ಹಿರಣ್ಯಪ್ಪ. ಐವರು ಹೆಣ್ಣು ಮಕ್ಕಳು.

ಮಕ್ಕಳಲ್ಲಿ ದೊಡ್ಡವಳು ಲಿಂಗಮ್ಮ, ಎರಡನೆಯಾತ ಹಿರಣ್ಯಪ್ಪ, ನಂತರದವರು ಸಾವಿತ್ರಮ್ಮ, ಚೌಡಮ್ಮ, ಗಂಗಮ್ಮ, ದೇವಕಮ್ಮ ಮತ್ತು ವರದಮ್ಮ.

ಮಗ ಹಿರಣ್ಯಪ್ಪ ಹುಟ್ಟಿದ್ದು ಕ್ರಿ.ಶ 1867ರಲ್ಲಿ. ಒಬ್ಬನೇ ಮಗನ ಮೇಲೆ ಪುಟ್ಟಪ್ಪನವರಿಗೆ ಸಹಜವಾಗಿ ಪ್ರೀತಿ. ತಂದೆ ತನ್ನ ಕೆಲಸದ ಪೆಟ್ಟಿಗೆ ಚೀರ್ಣಗಳನ್ನು ಹತ್ತಿರ ಇಟ್ಟುಕೊಂಡು ಕೂತರೆ ಮಗ ಅಲ್ಲಿಯೇ ಆಡಿಕೊಂಡಿರುತ್ತಿದ್ದ. ತಂದೆಗೆ ಭೀತಿ, ಮಗ ಎಲ್ಲಿ ಮೊನಚಾದ ಚೀರ್ಣಗಳಿಗೆ ಕೈ ಹಾಕುತ್ತಾನೋ ಎಂದು. ಆದರೆ ಮನೆಗೆ ಬಂದು ಹೋಗುವ ಜನ ಹೆಚ್ಚು. ಯಾರಾದರೊಬ್ಬರು ಹಿರಣ್ಯಪ್ಪನನ್ನು ಎತ್ತಿಕೊಂಡು ಹೋಗುತ್ತಿದ್ದರು.

ಮಗ ಬೆಳೆದ ಹಾಗೆ ಆತನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂದು ಪುಟ್ಟಪ್ಪ ಬಯಸಿದರು. ಮೂಡುಗೋಡು ಗೌಡರ ಮನೆಗೆ ಓರ್ವ ಅಯ್ಯನವರು ಗೌಡರ ಮಕ್ಕಳಿಗೆ ಅಕ್ಷರ ತಿದ್ದಿಸಲು ಬರುತ್ತಿದ್ದರು. ಮನೆ ಅಂಗಳದಲ್ಲಿ ಮರಳ ರಾಶಿ ಹಾಕಿ ಅದರ ಮೇಲೆ ಅಕ್ಷರ ಬರೆಸುತ್ತ ಕಲಿಸುವುದು ಅವರ ಪದ್ಧತಿ.ಒಂದಿಷ್ಟು ದಿನ ಹಿರಣ್ಯಪ್ಪ ಗೌಡರ ಮನೆಗೆ ಹೋಗಿ ಬಂದ. ಏಕೋ ಅಯ್ಯನವರ ಪಾಠ ಅವನಿಗೆ ಹಿಡಿಸಲಿಲ್ಲ. ಆತ ಪಾಠಕ್ಕೆ ಕಳ್ಳಬೀಳತೊಡಗಿದ.

ಆದರೆ ಪುಟ್ಟಪ್ಪ ಮಗನಲ್ಲಿ ಒಂದು ವಿಶೇಷ ಗುಣವನ್ನು ಕಂಡರು. ಗುಡಿಗಾರರ ಮಕ್ಕಳಿಗೆ ಅವರ ಕುಲಕಸುಬನ್ನು ತಂದೆಯೋ ಚಿಕ್ಕಪ್ಪನೋ ಅಣ್ಣನೋ ನಿಧಾನವಾಗಿ ಕಲಿಸುತ್ತಾರೆ. ಮೊದಲು ಚಿತ್ರ ಬರೆಯುವುದನ್ನೇ ಅವರು ಕಲಿಯಬೇಕು. ಕಾಗದದ ಮೇಲಾದರೂ ಸರಿ, ನೆಲದ ಮೇಲಾದರೂ ಸರಿ, ಕರಿ ಇದ್ದಿಲಿನಿಂದ ಚಿತ್ರ ಬರೆಯಬೇಕು. ಒಂದು ಬಳ್ಳಿ, ನಾಲ್ಕು ಎಲೆ. ಒಂದು ಹಂಸ ಒಂದು ಕಮಲ, ಗಿಳಿ, ಜಿಂಕೆ, ಹಾರುವ ಹಕ್ಕಿ, ಕ್ರಮೇಣ ಚೌಕಾಕಾರದ ನಡುವೆ ಹಬ್ಬಿಕೊಂಡ ಬಳ್ಳಿಗಳು. ಪ್ರಾಣಿ ಪಕ್ಷಿಗಳ ಸಮೂಹ, ಮರಗಿಡಗಳು. ಹೀಗೆಯೇ ಪಳಗಿದ ಹಾಗೆ ದೇವ ದೇವತೆಯರ ಚಿತ್ರಗಳು. ನೆಲ, ಕಾಗದದ ಮೇಲೆ ಚಿತ್ರ ಬರೆದಾದ ನಂತರ ಮರದ ತುಂಡಿನ ಮೇಲೆ ಒಂದು ಚಿತ್ರ ಬರೆದು ಅದನ್ನು ಕೆತ್ತುವುದು ಹೇಗೆ ಎಂಬುದನ್ನು ಕಲಿಸಿ ಕೊಡುತ್ತಾರೆ. ಇಲ್ಲಿ ಕಲಿಸುತ್ತಾರೆ ಎನ್ನುವುದಕ್ಕಿಂತ ಮಕ್ಕಳು ನೋಡಿಯೇ ಕಲಿಯುತ್ತವೆ. ಸಣ್ಣ ದೊಡ್ಡ ಪ್ರಮಾಣದ ಹಲವಾರು ಚೀರ್ಣಗಳು ಇರುತ್ತವೆ. ಸೂಕ್ಷ್ಮವಾದ ಕೆತ್ತನೆಗೆ ತೀರ ತೆಳುವಾದ ಸಣ್ಣದಾದ ಚೀರ್ಣ. ತುಸು ದೊಡ್ಡ ಕೆತ್ತನೆಗೆ ದೊಡ್ಡದು. ಏನು ಕೆತ್ತಬೇಕು ಅನ್ನುವುದರ ಮೇಲೆ ಚೀರ್ಣದ ಆಯ್ಕೆಯಾಗುತ್ತದೆ.

ಮೊದಲು ಹೂವು, ಎಲೆ, ಮೀನು, ಹಕ್ಕಿ ಎಂದು ಸಣ್ಣ ಪುಟ್ಟದನ್ನು ಕೆತ್ತುವ ಹುಡುಗ ಮರದ ತುಂಡು ಮತ್ತೇನೋ ಆಗಿ ಜೀವ ತಳೆದುದನ್ನು ಕಂಡು ಉತ್ಸುಕನಾಗುತ್ತಾನೆ. ಆ ಕೆಲಸದಲ್ಲಿ ಆಸಕ್ತಿ, ಶ್ರದ್ಧೆ ಮೂಡುತ್ತದೆ. ಉತ್ಸಾಹ ಬೆಳೆಯುತ್ತದೆ. ಆತ ಮುಂದುವರಿಯುತ್ತಾನೆ.

ಬಾಲ ಪ್ರತಿಭೆ

ಹಿರಣ್ಯಪ್ಪ ಚಿತ್ರ ಬರಯಲು ಕರಿ ಇದ್ದಿಲು ಎತ್ತಿಕೊಂಡನಾದರೂ ಆತ ಬರೆದದ್ದು ನೇರವಾಗಿ ಹಲಗೆಯ ತುಂಡಿನ ಮೇಲೆ. ಚಿತ್ರ ಬರದ ನಂತರ ಕೈಗೆ ಚೀರ್ಣ ಎತ್ತಿಕೊಂಡು ಕೆತ್ತನೆಯ ಕೆಲಸ ಆರಂಭಿಸಿದ್ದ. ಮಗನ ಕೈಯ ಸೂಕ್ಷ್ಮಗಾರಿಕೆಗೆ ತಂದೆ ಪುಟ್ಟಪ್ಪ ಮಾತ್ರವಲ್ಲ ಮನೆಗೆ ಬರುತ್ತಿದ್ದ ಬಂಧು ಬಾಂಧವರು ಕೂಡ ತಲೆದೂಗಿದ್ದುಂಟು.

ಹೀಗೆ ಬಾಲ್ಯದಲ್ಲಿಯೇ ಕೆತ್ತನೆ ಕೆಲಸದ ಎಲ್ಲ ಸೂಕ್ಷ್ಮತೆಗಳನ್ನೂ ಹಿರಣ್ಯಪ್ಪ ಅರಗಿಸಿಕೊಂಡು ಬೆಳೆದ. ಹಳ್ಳಿಗರಿಗೆ ಬೇಕಾದ ಮಾರಮ್ಮನ ವಿಗ್ರಹಗಳನ್ನು, ಪೆಟ್ಟಿಗೆ, ಸಂದೂಕಗಳನ್ನು, ಮಕ್ಕಳ ಆಟದ ಬೊಂಬೆಗಳನ್ನು ಈತ ಮಾಡಲು ಕಲಿತ. ತಂದೆಯ ಮಾರ್ಗದರ್ಶನವಂತೂ ಇತ್ತು. ಮನೆಗೆ ಬಂದು ಹೋಗುತ್ತಿದ್ದ ಕುಲಬಾಂಧವರು ಇವನ ಪ್ರತಿಭೆಯನ್ನು ಕಂಡು ಹುರಿದುಂಬಿಸಿದರು. ಹಿರಣ್ಯಪ್ಪ ಬೇಗನೆ ತನ್ನ ಕೈ ಕುದುರಿಸಿಕೊಂಡ.

ಮೂಡುಗೋಡು ಮನೆ ಆ ಪ್ರದೇಶದಲ್ಲಿಯೇ ದೊಡ್ಡ ಮನೆಯಾಗಿತ್ತಲ್ಲದೆ, ಪುಟ್ಟಪ್ಪನವರು ಇದ್ದುದರಲ್ಲಿ ಕೊಂಚ ಮಟ್ಟಿಗೆ ಅನುಕೂಲವಾಗಿಯೇ ಇದ್ದರು. ಇವರಿಗೆ ಯಕ್ಷಗಾನ ಗಮಕದ ಹುಚ್ಚು ಬೇರೆ. ಮಳೆಗಾಲ ಮುಗಿಯುತ್ತಿದ್ದಂತೆ ಘಟ್ಟದ ಕೆಳಗಿನಿಂದ ಯಕ್ಷಗಾನ ಕಲಾವಿದರು ತಮ್ಮ ಸುತ್ತಾಟವನ್ನು ಆರಂಭಿಸಿ ಹಳ್ಳಿಗಳಿಗೆ ಬರುತ್ತಿದ್ದರು. ಯಕ್ಷಗಾನ ವೇಷ ಭೂಷಣಗಳು ತುಂಬಿದ ದೊಡ್ಡ ದೊಡ್ಡ ಬೆತ್ತದ ಪೆಟ್ಟಿಗೆಗಳನ್ನು ಹೊತ್ತು, ಸ್ವರಪೆಟ್ಟಿಗೆ, ಚಂಡೆ, ತಾಳಗಳನ್ನು ಹಿಡಿದು ಅವರು ಹಳ್ಳಿಯ ದೊಡ್ಡ ಮನೆಗೆ ಬರುವುದು ರೂಢಿ. ಅಲ್ಲಿ ಮನೆಯ ಯಜಮಾನನ ಮುಂದೆ, ಹಳ್ಳಿಯ ಪ್ರಮುಖರ ಸಮ್ಮುಖದಲ್ಲಿ ಅರ್ಧತಾಸು ಯಕ್ಷಗಾನದ ಒಂದು ಪ್ರಸಂಗವನ್ನು ಹಾಡಿ ತೋರಿಸುತ್ತಿದ್ದರು. ಈ ಹಾಡುಗಾರಿಕೆ ಮನೆ ಯಜಮಾನನಿಗೆ ಒಪ್ಪಿಗೆಯಾದರೆ, ಈ ಮೇಳದವರು ಚೆನ್ನಾಗಿ ಆಡಬಲ್ಲರು ಎಂಬುದು ಖಚಿತವಾದರೆ ಯಜಮಾನ

ಅವರಿಗೆ ಆಟಕ್ಕೆ ವೀಳ್ಯ ಕೊಡುತ್ತಿದ್ದ. ಅನಂತರ, ತಂಡದವರು ಅಂದಿನ ಊಟದ ವ್ಯವಸ್ಥೆಗೆ ತೊಡುಗುತ್ತಿದ್ದರು. ಅಂದು ಸಂಜೆ ಆ ಮನೆಯ ಮುಂದಿನ ಅಂಗಳದಲ್ಲಿ ಇಲ್ಲವೆ ಹತ್ತಿರದ ಬಯಲಿನಲ್ಲಿ ಬಯಲಾಟ.

ಮೂಗೋಡಿನಲ್ಲಿ ತಮಗೊಂದು ಅವಕಾಶ ದೊರೆಯುತ್ತದೆಂಬುದು ಸಾಮಾನ್ಯವಾಗಿ ಎಲ್ಲ ತಂಡದವರಿಗೂ ಗೊತ್ತಿದ್ದ ವಿಷಯ. ಹೀಗಾಗಿ ಮಳೆಗಾಲ ಮುಗಿದ ನಂತರ ಎರಡು ಮೂರು ತಂಡಗಳು ಮೂಡುಗೋಡಿಗೆ ಬಂದೇ ತೀರುತ್ತಿದ್ದವು. ಹೀಗೆ ಬಂದ ತಂಡಗಳಿಗೆ ನಿರಾಶೆಯಂತೂ ಆಗುತ್ತಿರಲಿಲ್ಲ. ಮೂಡುಗೋಡು ಪುಟ್ಟಪ್ಪನವರು ಈ ತಂಡಗಳಿಗೆ ಮರ್ಯಾದೆ ಮಾಡಿ ಕಳುಹಿಸುತ್ತಿದ್ದರು.

ಯಕ್ಷಗಾನ ಬಯಲಾಟದಲ್ಲಿ ಪ್ರದರ್ಶನಗೊಳ್ಳುತ್ತಿದ್ದುದು ವಿಶೇಷವಾಗಿ ರಾಮಾಯಣ, ಮಹಾಭಾರತ, ಭಾಗವತದ ಕತೆಗಳು; ಪುಟ್ಟಪ್ಪನವರ ಭಾವಂತಿ ಮನೆಯ ಮುಂಭಾಗವೇ ರಂಗಸ್ಥಳ. ಮನೆ ಜಗಲಿಯ ಮೇಲ ಪುಟ್ಟಪ್ಪನವರು ಕುಳಿತುಕೊಂಡರೆ, ಹಳ್ಳಿಯ ಕೆಲ ಪ್ರಮುಖರು ಅವರ ಮಗ್ಗುಲಲ್ಲಿ, ಹಳ್ಳಿಯ ಇತರ ಜನ ಜಗಲಿ ಕೆಳಗಿನ ಅಂಗಳದಲ್ಲಿ, ಪುಟ್ಟಪ್ಪನವರ ಪಕ್ಕದಲ್ಲಿ ಹಿರಣ್ಯಪ್ಪ ಇದ್ದೇ ಇರಬೇಕು. ಏಕೆಂದರೆ ಇವನಿಗೆ ಯಕ್ಷಗಾನವೆಂದರ ಹುಚ್ಚು.

ಸಂಜೆ ಆರು ಏಳು ಗಂಟೆಗೆಲ್ಲ 'ಕೇಳಿ' ಪ್ರಾರಂಭವಾಗುತ್ತಿತ್ತು. ಚಂಡೆಯೊಂದನ್ನು ಇರಿಸಿಕೊಂಡು ಚಂಡೆ ಹೊಡೆಯುವಾತ ಚೌಕಿಯ ಮುಂದೆ ನಿಂತು ಚಂಡೆ ಹೊಡೆಯ ತೊಡಗಿದರೆ ಅದು ಸುತ್ತಮುತ್ತಲಿನ ಮೂರುನಾಲ್ಕು ಮೈಲಿಗೆಲ್ಲ ಕೇಳಿಸಿ, ಮೂಡುಗೋಡಿನಲ್ಲಿ ಯಕ್ಷಗಾನವಿದೆ ಎಂದು ಜನ ಧಾವಿಸಿ ಬರುತ್ತಿದ್ದರು. ರಾತ್ರಿ ಹತ್ತಕ್ಕೆ ಆಟ ಆರಂಭವಾದರೆ ಮಂಗಳ ಹಾಡುವುದು ಬೆಳಕು ಹರಿದಾಗಲೇ. ಅಲ್ಲಿಯವರೆಗೆ ಹಿರಣ್ಯಪ್ಪ ಎಚ್ಚೆತ್ತುಕೊಂಡು ಇಡೀ ಪ್ರಸಂಗವನ್ನು ನೋಡುತ್ತಿದ್ದ. ಬಯಲಾಟದ ಕತೆ, ಅಲ್ಲಿಯ ಪಾತ್ರಗಳು, ಪ್ರಸಂಗ, ಸಂದರ್ಭ, ಕತೆಯ ಪ್ರಮುಖ ಹಂತಗಳು ಎಲ್ಲವುಗಳ ಬಗ್ಗೆಯೂ ಅವನಿಗೆ ಕುತೂಹಲ.

ಅಲ್ಲದೆ ಮೂಡುಗೋಡು ಪುಟ್ಟಪ್ಪನವರಿಗೆ ರಾಮಾಯಣ, ಮಹಾಭಾರತ ಮತ್ತಿತರ ಕಾವ್ಯಗಳನ್ನು ಕೇಳುವ ಹುಚ್ಚು. ಸೊರಬದ ಗಮಕಿಗಳು ಓರ್ವರು ಆಗಾಗ್ಗೆ ಬಂದು ಕಾವ್ಯಗಳನ್ನು ಓದಿ ಅದರ ಅರ್ಥವನ್ನು ಹೇಳುವ ಪದ್ದತಿ ಕೂಡ ಭಾವಂತಿ ಮನೆಯ

ಒಂದು ಸಂಪ್ರದಾಯ. ಈ ಗಮಕಿಗಳಿಗೆ ಸೂಕ್ತ ಮರ್ಯಾದೆಯೂ ಸಲ್ಲುತ್ತಿತ್ತು. ಕಿರಿಯನಾದ ಹಿರಣ್ಯಪ್ಪನಿಗೆ ಈ ಗಮಕ ಕೇಳುವುದರಲ್ಲಿ ಆಸಕ್ತಿ. ಇದರಿಂದಲೇ ರಾಮಾಯಣ, ಭಾಗವತ, ಮಹಾಭಾರತಗಳೆಲ್ಲ ಆತನಿಗೆ ಚಿಕ್ಕಂದಿನಲ್ಲೇ ಪರಿಚಿತವಾಗಿದ್ದವು. ದೇವ ದೇವತೆಗಳ ಲಕ್ಷಣ, ಅವರ ವೈಶಿಷ್ಟ್ಯ ಅವರ ಉಡುಗೆ ತೊಡುಗೆ ಇತ್ಯಾದಿಗಳ ಪರಿಚಯ ಅವರಿಗಿತ್ತು. ಅಲ್ಲದೆ ಗುಡಿಗಾರರಿಗೆ ಯಾವ ಯಾವ ದೇವತೆಗಳ ಲಕ್ಷಣ ಏನೇನು ಎಂಬುದು ತಿಳಿದುಕೊಂಡಿರುವುದು ಅತ್ಯವಶ್ಯಕ. ಅವರು ದೇವ ದೇವತೆಯ ವಿಗ್ರಹಗಳನ್ನು ಕೆತ್ತಬೇಕಾದುದರಿಂದ ಈ ದೇವತೆಗಳ ನಿಲುವು, ಆಕಾರ, ತೊಡುವ ಆಭರಣಗಳು, ಧರಿಸುವ ಶಸ್ತ್ರಗಳು, ಇತ್ಯಾದಿಗಳನ್ನೆಲ್ಲ ತಿಳಿದುಕೊಂಡಿರುತ್ತಾರೆ. ಪುಟ್ಟಪ್ಪನವರು ಪ್ರತಿ ದೇವ ದೇವತೆಯರ ಲಕ್ಷಣಗಳನ್ನು ಸಾರುವ ಸಂಸ್ಕೃತ ಶ್ಲೋಕಗಳನ್ನು ಕಲಿತುಕೊಂಡಿದ್ದರು. ಮಗ ಹಿರಣ್ಯಪ್ಪನಿಗೂ ಅವರು ಈ ಶ್ಲೋಕಗಳನ್ನು ಕಲಿಸಿದರು.

ಹಿರಣ್ಯಪ್ಪ ಬಾಲ್ಯವಸ್ಥೆಯನ್ನು ದಾಟಿ ಯೌವನಾವಸ್ಥೆಗೆ ಬರುವಷ್ಟರಲ್ಲಿ ತಂದೆಯಿಂದ ಸಾಕಷ್ಟು ಕಲಿತುಕೊಂಡ. ಅವನ ಸ್ವಂತ ಪ್ರತಿಭೆಯೂ ಅವನನ್ನು ಕೈ ಹಿಡಿದು ಮುನ್ನಡೆಸಿತು.

ಹಿರಣ್ಯಪ್ಪ ಗುಡಿಗಾರರ ಮಕ್ಕಳು ಪ್ರಾರಂಭದಲ್ಲಿ ಮಾಡುತ್ತಿದ್ದ ಚಿಕ್ಕಪುಟ್ಟ ವಸ್ತುಗಳನ್ನು ತಯಾರಿಸುವ ಹಂತವನ್ನು ಎಂದೋ ದಾಟಿ ಬಿಟ್ಟಿದ್ದ. ಈಗ ಅವನು ಗಂಧದ ಕರಂಡಕ, ದೇವತಾ ವಿಗ್ರಹಗಳನ್ನು ಮಾಡಲಾರಂಭಿಸಿದ್ದ. ಸೊರಬ, ಸಾಗರದಲ್ಲಿ ಈ ವಿಗ್ರಹಗಳಿಗೆ ಒಳ್ಳೆಯ ಬೇಡಿಕೆಯೂ ಇತ್ತು. ಗಂಧ, ದಂತದ ವಿಗ್ರಹಗಳನ್ನು ಮಾರುವ ಅಂಗಡಿಗಳು ಇರಲಿಲ್ಲವಾದರೂ ಕೆಲ ಶ್ರೀಮಂತರು ಮೊದಲೇ ಹೇಳಿ ವಿಗ್ರಹಗಳನ್ನು ಮಾಡಿಸುತ್ತಿದ್ದರು. ಇಲ್ಲವೇ ಗುಡಿಗಾರರು ಮನೆ ಬಾಗಿಲಿಗೆ ತಂದ ವಿಗ್ರಹಗಳನ್ನು ಕೊಳ್ಳುತ್ತಿದ್ದರು.

ಹಿರಣ್ಯಪ್ಪ ವಿಗ್ರಹಗಳನ್ನು ಕೆಲ ಶ್ರೀಮಂತರ ಮನೆಗಳಿಗೆ ಮಾರಲು ಕೊಂಡೊಯ್ಯುವುದಿತ್ತು. ಅಲ್ಲಿ ವಿಗ್ರಹಕ್ಕೆ ಸಂಬಂಧಪಟ್ಟ ಶ್ಲೋಕವನ್ನು ಹೇಳಿಯೇ ಹಿರಣ್ಯಪ್ಪ ವಿಗ್ರಹವನ್ನು ಶ್ರೀಮಂತರ ಮುಂದಿಡುತ್ತಿದ್ದ. ಶ್ಲೋಕ ಹೀಗಿದೆ. ಶ್ರೀಗಂಧವಲ್ಲಿ

ವಿಗ್ರಹ ಹೀಗೆ ಮೂಡಿ ಬಂದಿದೆ ಎಂಬುದನ್ನು ತನ್ನ ಮಾತುಗಾರಿಕೆಯಿಂದ ಹಿರಣ್ಯಪ್ಪ ವರ್ಣಿಸಿದಾಗ, ವಿಗ್ರಹ ಕೊಳ್ಳುವವರಿಗೆ ಸಂತೋಷವಾಗುತ್ತಿತ್ತು ಈ ಶಿಲ್ಪಿಯ ಬಗ್ಗೆ ಗೌರವ ಮೂಡುತ್ತಿತ್ತು.

ಏಕೆಂದರೆ ಬಹುತೇಕ ಗುಡಿಗಾರರಿಗೆ ಈ ಶಾಸ್ತ್ರ ಗೊತ್ತಿರುತ್ತಿದ್ದಿಲ್ಲ. ಹಿಂದಿನವರು ಹಿರಿಯರು ಹೇಗೆ ಚಿತ್ರ ಬರೆದಿರುತ್ತಿದ್ದರೋ ಹಾಗೆಯೇ ಗಂಧದ ತುಂಡಿನ ಮೇಲೆ ಚಿತ್ರ ಬರೆದು ವಿಗ್ರಹ ಕೆತ್ತುತ್ತಿದ್ದರು. ವಿಗ್ರಹಕ್ಕೆ ನಾಲ್ಕು ಕೈಗಳು ಏಕೆ, ಯಾವ ಕೈಯಲ್ಲಿ ಶಂಕ ಇರಬೇಕು, ಚಕ್ರ ಇರಬೇಕು, ಆ ದೇವತೆಯ ವಾಹನ ಇದೇ ಏಕೆ ಎಂಬಿತ್ಯಾದಿ ವಿಚಾರಗಳು ಅವರಿಗೆ ತಿಳಿದಿರುತ್ತಿರಲಿಲ್ಲ. ಆದರೆ ಈ ವಿಷಯದಲ್ಲಿ ಹಿರಣ್ಯಯಪ್ಪ ಪ್ರಾವೀಣ್ಯವನ್ನು ಪಡೆದಿದ್ದನು. ಅಷ್ಟೇ ಅಲ್ಲ, ಗಂಧದಲ್ಲಿ ಹೊಸ ಬಗೆಯ ವಿನ್ಯಾಸಗಳನ್ನು, ವಿಗ್ರಹಗಳನ್ನು ಕೆತ್ತಬಲ್ಲವನಾಗಿದ್ದನು. ಈ ಕಾರಣದಿಂದಾಗಿ ಸೊರಬ, ಸಾಗರ ಪ್ರಾಂತ್ಯಗಳಲ್ಲಿ ಚಿಕ್ಕ ವಯಸ್ಸಿನಲ್ಲಿಯೇ ಹಿರಣ್ಯಪ್ಪನಿಗೆ ಒಳ್ಳೆಯ ಹೆಸರು ಬಂದಿತು.

ಇದೇ ಸಂದರ್ಭದಲ್ಲಿ ಹಿರಣ್ಯಪ್ಪ ಸೊರಬದ ಹತ್ತಿರದ ಕುಬಟೂರು, ಕುಪ್ಪಗಡ್ಡೆ, ಬಳ್ಳಿಗಾವೆ, ಸಾಗರದ ಹತ್ತಿರವಿದ್ದ ಇಕ್ಕೇರಿ, ಕೆಳದಿ ದೇವಾಲಯಗಳನ್ನು ನೋಡಿ ಬಂದನು. ಚಾಲುಕ್ಯರ ಕಾಲದ, ವಿಜಯನಗರದ ಅರಸರ ಕಾಲದ ಶಿಲ್ಪಕಲೆಯ ಪರಿಚಯ ಅವನಿಗೆ ಆಗದಿರಲಿಲ್ಲ. ಈ ದೇವಾಲಯಗಳಿಗೆ ಹೋದಾಗ ಕಾಗದ, ಸೀಸದ ಕಡ್ಡಿಯನ್ನು ಜೊತೆಗೆ ತೆಗೆದುಕೊಂಡು ಹೋಗಿ ಅಲ್ಲಿಯ ವಿಗ್ರಹಗಳ, ಪ್ರಾಣಿ, ಪಕ್ಷಿಗಳ, ಕುದುರೆ ಸವಾರರ ಚಿತ್ರಗಳನ್ನು ಬರೆದುಕೊಂಡು ಬಂದು ಮನೆಯಲ್ಲಿ ಅವುಗಳಂತೆಯೇ ತಾನೂ ಕೆತ್ತಲು ಪ್ರಯತ್ನಿಸುತ್ತಿದ್ದನು. ಕಲ್ಲಿನಲ್ಲಿ ವಿಗ್ರಹಗಳನ್ನು, ಬೃಹದಾಕಾರದ ದೇವಾಲಯಗಳನ್ನು ನಿರ್ಮಿಸಿದ ಆ ರೂವಾರಿಗಳ ಪ್ರತಿಭೆ, ತಾಳ್ಮೆ, ಜಾಣ್ಮೆಗೆ ಇವನ ತಲೆ ಬಾಗಿತು. ಬಳ್ಳಿಗಾವೆ, ಇಕ್ಕೇರಿಗಳ ಶಿಲ್ಪಗಳಲ್ಲಿಯ ವ್ಯತ್ಯಾಸವನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದನು. ಈ ಎರಡೂ ಶಿಲ್ಪ ಸಂಪ್ರದಾಯಗಳ ಕಾಲ ಅವರು ಬಳಸಿದ ಶಿಲೆ, ವೈಶಿಷ್ಟ್ಯಗಳ ಬಗ್ಗೆಯೂ ಅಭ್ಯಾಸ ಮಾಡಿದನು. ಬಳ್ಳಿಗಾವೆ ಕರ್ನಾಟಕ ಶಿಲ್ಪ ಚರಿತ್ರೆಯ ಒಂದು ಮೈಲಿಗಲ್ಲಾದರೆ, ವಿಜಯನಗರ, ಪಾರ್ಸಿಕ ಶೈಲಿಯ ಇಕ್ಕೇರಿ ಮತ್ತೊಂದು ಮಜಲಾಗಿತ್ತು. ಜೊತೆಗೆ ಶಿಲೆಯಲ್ಲಿ ಕಾವ್ಯವನ್ನೇ ಸೃಷ್ಟಿಸಿದ ಬೇಲೂರು, ಹಳೆಬೀಡುಗಳಿಗೂ ಹಿರಣ್ಯಪ್ಪ ಹೋಗಿ ಬಂದನು. ಹೊಯ್ಸಳ

ಶೈಲಿಯ ನಯನಾಜೂಕುತನ, ನುಣುಪು, ಲಾಸ್ಯ ಎಲ್ಲ ವಿವರಗಳನ್ನೂ ಸೂಕ್ಷ್ಮಾತಿಸೂಕ್ಷ್ಮವಾಗಿ ನೀಡುವ ಅವರ ಶೈಲಿ ಇವನಿಗೆ ಹಿಡಿಸಿತು. ಈ ಪ್ರಾಚೀನ ಶಿಲ್ಪಿಗಳ ಸಾಧನೆ ಪ್ರೌಢಿಮೆ ಇವನನ್ನು ಬೆರಗುಗೊಳಿಸಿತು.

ಹಿರಣ್ಯಪ್ಪ ಕಲಾಕ್ಷೇತ್ರದಲ್ಲಿ ಪ್ರವರ್ಧಮಾನಕ್ಕೆ ಬರುವಷ್ಟರಲ್ಲಿ ಇವನ ತಂದೆ ಮೂಡುಗೋಡು ಪುಟ್ಟಪ್ಪ, ತಾಯಿ ಲಕ್ಷ್ಮಮ್ಮ ದಿವಂಗತರಾಗಿದ್ದರು. ಹಿರಣ್ಯಪ್ಪನವರ ಅಕ್ಕ ಒಂದಿಬ್ಬರು ತಂಗಿಯರ ಮದುವೆಯಾಗಿತ್ತು. ಇರಾಣಪುರದಲ್ಲಿದ್ದ ಜಮೀನನ್ನು ಓರ್ವ ರೈತ ಗೇಣಿದಾರನಾಗಿ ನೋಡಿಕೊಳ್ಳುತ್ತಿದ್ದ. ಪ್ರತಿ ಸುಗ್ಗಿಗೆ ಆತ ಒಂದಿಷ್ಟು ಬತ್ತ ತಂದು ಹಾಕುತ್ತಿದ್ದ. ಇನ್ನುಳಿದ ಹಾಗೆ ಮನೆ ಖರ್ಚಿಗೆ ಇವರ ಗುಡಿಗಾರಿಕೆಯ ಮೇಲೆಯೇ ಅವಲಂಬಿಸಿಕೊಳ್ಳಬೇಕಾಗಿತ್ತು. ಇಷ್ಟು ಹೊತ್ತಿಗೆ ಹಿರಣ್ಯಪ್ಪನವರಿಗೆ ಒಳ್ಳೆಯ ಹೆಸರು ಬಂದದ್ದರಿಂದ ಸಾಕಷ್ಟು ಕೆಲಸವೂ ಇತ್ತು. ಗಂಧದ ಕೆತ್ತನೆಯ ಜೊತೆಗೆ ದಂತದ ಕೆಲಸಕ್ಕೂ ಅವರು ತೊಡಗಿದ್ದರು. ಹಿರಣ್ಯಪ್ಪನವರ ಮದುವೆಯೂ ಆಗಿತ್ತು. ಸೊರಬದ ದ್ವಾರಕಮ್ಮ ಇವರ ಧರ್ಮಪತ್ನಿಯಾಗಿ ಬಂದಿದ್ದಳು

ಕೆಲಸದಲ್ಲಿ ನಿಷ್ಠೆ

ಗುಡಿಗಾರರ ಮನೆ ಎಂದರೆ ಒಂದು ಕಲಕ್ಷೇತ್ರ. ಹಿರಿಯ ವ್ಯಕ್ತಿ ತನ್ನ ಪೆಟ್ಟಿ, ಚೀರ್ಣಗಳ ಜೊತೆ ಒಂದು ಕಡೆ ಕುಳಿತರೆ, ಕೆಲಸ ಕಲಿಯಲೆಂದು ಬರುವವರು ಅವರ ಸುತ್ತ ಕುಳಿತುಕೊಳ್ಳಬೇಕು. ಈ ಸುತ್ತ ಕುಳಿತವರೆಲ್ಲ ಹಂತ ಹಂತವಾಗಿ ಕೆಲಸ ಕಲಿತವರು ಇಲ್ಲವೆ ಕೆಲಸ ಕಲಿಯುವವರು. ಕೆಲವರಿನ್ನೂ ರೇಖೆಗಳನ್ನು ಬರೆಯುವ ಹಂತದಲ್ಲಿದ್ದಾರೆ. ಕೆಲವರು ಗಂಧದ ಬಾಚಣಿಗೆ ಮಾಡುವವರಿದ್ದಾರೆ. ಹಂಸ, ದುಳಿ ಎಂದು ಸಣ್ಣ ಪುಟ್ಟ ವಸ್ತುಗಳನ್ನು ಮಾಡುವವರು ಉಳಿದವರು.

ಹಿರಣ್ಯಪ್ಪನವರು ಶಿಸ್ತಿನ ಸಿಪಾಯಿ. ತಂದೆಯ ಹಾಗೆಯೇ ದೈವಭಕ್ತ. ಕಡಿಮೆ ಎಂದರೆ ಒಂದು ಗಂಟೆ ಪೂಜೆ, ನಂತರ ಕೆಲಸದ ಮೇಲೆ ಬಂದು ಕುಳಿತುಕೊಳ್ಳುವುದು. ತುಸು ಕಪ್ಪುವ್ಯಕ್ತಿಯಾಗಿದ್ದರಿಂದ ಹಣೆಯ ಮೇಲಿನ ವಿಭೂತಿ ಕಟ್ಟು ಎದ್ದು ಕಾಣುತ್ತಿತ್ತು. ಕೆಲಸಕ್ಕೆ ತೊಡಗಿದ್ದಾಗ ಯಾರೂ ಮಾತನಾಡುವಂತಿಲ್ಲ. ಹಾಳು ಹರಟೆ ಇಲ್ಲ. ನಡುವೆ ಎದ್ದು ಹೊರ ಹೋಗುವಂತಿಲ್ಲ. ಪೆಟ್ಟಿಗೆ, ಚೀರ್ಣ ಇತ್ಯಾದಿಗಳನ್ನು ಸರಿಯಾಗಿ ಇಟ್ಟುಕೊಳ್ಳಬೇಕು. ಶಿಷ್ಯರು, ಹೇಳಿದುದನ್ನು ಸರಿಯಾಗಿ ಮಾಡದಿದ್ದರೆ ಇವರಿಗೆ ಅಸಾಧ್ಯ ಕೋಪ ಏಟು ತಿನ್ನದ ಶಿಷ್ಯರೇ ಇಲ್ಲ. ಆದರೆ ಊಟಕ್ಕೆ ಕುಳಿತಾಗ ಅಂದು ಏಟು ತಿಂದ ಶಿಷ್ಯನನ್ನು ತುಂಬಾ ಆಸಕ್ತಿಯಿಂದ ವಿಚಾರಿಸಿಕೊಳ್ಳುತ್ತಿದ್ದರು. ಇವರು ಬೈಯ್ದರೆಂದು ಬೇಸರ ಮಾಡಿಕೊಂಡ ಶಿಷ್ಯ ಊಟಕ್ಕೆ ಬಾರದಿದ್ದರೆ ಇವರೇ ಹೋಗಿ ಅವನಿಗೆ ಸಮಾಧಾನ ಮಾಡಿ ಕರೆ ತರುತ್ತಿದ್ದರು.

ಸಂಜೆಯಾದಕ್ಷಣ ಕೆಲಸ ಮುಂದುವರಿಯಬೇಕು. ದೊಡ್ಡ ಹರಳೆಣ್ಣೆ ದೀಪ ಇವರ ನಡುವೆ ಉರಿಯಬೇಕು. ಪ್ರತಿದಿನ ಈ ದೀಪಕ್ಕೆ ಕುಂಕುಮ ಅರಸಿನ ಹಚ್ಚಿಯೇ ಇದನ್ನು ಹೊತ್ತಿಸಬೇಕು. ಕತ್ತಲಾಯಿತೆನ್ನುವಾಗ ದೀಪ ಸಿದ್ಧವಾಗಬೇಕು. ಇಲ್ಲವೆಂದೆರೆ ಅನಂತರ ಬಂದ ದೀಪವನ್ನು ತೆಗೆದು ರಸ್ತೆಗೆ ಎಸೆದಾರು. ಅಂತಹ ಕೋಪ. ಅವು

ಗುಡಿಗಾರರಿಗೆ ಗೌರವವಿಲ್ಲದ ದಿನಗಳು. ಏನೋ ಮರದಲ್ಲಿ ಕೆತ್ತುತ್ತಾನೆ ಎಂಬ ಭವನೆ ಜನರಲ್ಲಿ ಸ್ವಲ್ಪ ಅಕ್ಕಿ, ಅಡಕೆ ಕೊಟ್ಟರೆ ಕೆಲಸ ಮಾಡಿಕೊಡುತ್ತಾನೆ ಎಂಬ ಧೋರಣೆ.

ಮುಟುಗುಪ್ಪೆ ಮೂಡುಗೋಡಿಗೆ ಹತ್ತಿರದ ಒಂದು ಹಳ್ಳಿ. ಅಲ್ಲಿ ಅಮ್ಮನದೊಂದು ಜಾತ್ರೆ. ಅಮ್ಮನ ವಿಗ್ರಹ ಮಾಡುವವರು ಲಾಗಾಯ್ತಿನಿಂದ ಹಿರಣ್ಯಪ್ಪನವರ ವಂಶಸ್ಥರು. ವಿಗ್ರಹ ಮಾಡಿಕೊಟ್ಟು ಜಾತ್ರೆಯ ದಿನ ವಿಗ್ರಹಕ್ಕೆ ದೃಷ್ಟಿಇರಿಸಿಕೊಟ್ಟದ್ದಕ್ಕೆ ಇವರಿಗೆ ಸಲ್ಲುತ್ತಿದ್ದುದು ಮೂರುಗಿದ್ನ ಅಕ್ಕಿ, ಒಂದು ರೂಪಾಯಿ. ಇದನ್ನು ಪಡೆಯಲು ಜಾತ್ರೆ ಮುಗಿದ ಎರಡು ತಿಂಗಳವರೆಗೆ ಹತ್ತು ಸಲ ತಿರುಗಾಡಿ ಬರಬೇಕು. ಆದರೆ ಆ ವರ್ಷ ಹಿರಣ್ಯಪ್ಪನವರು ಖಡಾಖಂಡಿತವಾಗಿ ಹೇಳಿದರು.

"ವಿಗ್ರಹ ಮಾಡಿ ಕೊಡತೇನೆ... ನೀವು ಕೊಡೋದನ್ನ ಕೂಡಲೇ ಕೊಡಬೇಕು..." ಹಳ್ಳಿ ಮುಖ್ಯಸ್ಥರ ಕಣ್ಣು ಕೆಂಪಗಾಯಿತು. ಏನು ಗುಡಿಗಾರರಿಗೂ ಇಷ್ಟು ಸೊಕ್ಕು ಬಂತೆ ಎಂದು.

"ಕೊಡೋಣ ಕೊಡೋಣ..." ಎಂದರವರು.

ವಿಗ್ರಹ ಸಿದ್ಧವಾಯಿತು. ನಾಳೆ ಬೆಳಿಗ್ಗೆ ಜಾತ್ರೆ ವಿಗ್ರಹಕ್ಕೆ ದೃಷ್ಟಿ ಇಡಬೇಕಲ್ಲ.

"... ದೃಷ್ಟಿ ಇಡಿ..." ಎಂದರು ಪ್ರಮುಖರು.

"ಬರೋದು ಚುಕ್ತ ಮಾಡಿ... ನಾನು ದೃಷ್ಟಿ ಇಟ್ಟು ಕೊಡತೇನೆ..."
ಹಳ್ಳಿ ಪ್ರಮುಖರಿಗೆ ಅವಮಾನವಾಯಿತು. ಯಾರೂ ಅವರನ್ನು ಹೀಗೆ ಕಂಡಿರಲಿಲ್ಲ.

"... ಅರೆ ನಿಮ್ಮ ಕೆಲಸ ಮೊದಲಾಗಲಿ... ನಾವೇನು ಓಡಿ ಹೋಗುವವರ..."

"ಅದೆಲ್ಲ ಆಗೋದಿಲ್ಲ... ದೋಣಿ ದಾಟಿದ ಮೇಲೆ ಅಂಬಿಗ ಯಾರೋ ಅನ್ನುವವರು ನೀವು... ನನಗೆ ಬರಬೇಕಾದ್ದನ್ನ ತಂದಿಡಿ... ಇಲ್ಲ ನಾನು ಹೊರಟೆ..."

ಹಿರಣ್ಯಪ್ಪ ಉಳಿ ಹಿಡಿದುಕೊಂಡು ಹೊರಟುನಿಂತರು. ನಿಂತದ್ದು ಮಾತ್ರವಲ್ಲ ಗುಡಿಯಿಂದ ಹೊರಬಿದ್ದೂ ಆಯಿತು.

ಆಗ ಪ್ರಮುಖರು ಗಾಬರಿಯಾದರು. ಮೂರುಗಿದ್ನ ಅಕ್ಕಿ ಬಂದಿತು. ಒಂದು ರೂಪಾಯಿ ಎಲೆ ಅಡಿಕೆ ಸಹಿತ ಹಿರಣ್ಯಪ್ಪನವರ ಮುಂದೆ ಇಟ್ಟು, ಕೈ ಮುಗಿದರು.

ಹಿರಣ್ಯಪ್ಪ ಗೆದ್ದರು.

ಈ ಘಟನೆಯ ನಂತರ, ಸೊರಬ, ಸಾಗರ, ಸಿದ್ದಾಪುರ, ಶಿರಸಿ ಸೀಮೆಗಳಲ್ಲಿ ಗುಡಿಗಾರರ ಗೌರವ ಹೆಚ್ಚಿತು.

ಅರಮನೆ ಕೆಲಸ

ಇದೇ ಸಂದರ್ಭದಲ್ಲಿ ಮಲೆನಾಡಿನ ಗುಡಿಗಾರರಿಗೆ ನಿಜಕ್ಕೂ ರಾಜ ಮಾನ್ಯತೆ ದೊರೆಯುವಂಥ ಒಂದು ಅವಕಾಶ ಒದಗಿ ಬಂದಿತು. ಮೈಸೂರಿನಲ್ಲಿ ಮಹಾರಾಜರ ಈ ಹಿಂದೆ ಇದ್ದ ಮರದ ಅರಮನೆಗೆ ಬೆಂಕಿ ಬಿದ್ದು ಅರಮನೆ ಸುಟ್ಟು ಹೋಯಿತು. ಹೊಸದೊಂದು ಅರಮನೆಯ ಕೆಲಸ ಆರಂಭವಾಗುತ್ತಿದ್ದಂತೆಯೇ ನಾಜೂಕಿನ ಕೆಲಸಗಳಿಗೆ ಗುಡಿಗಾರರನ್ನು ಕರೆಸಿ ಕೊಳ್ಳಬೇಕೆಂಬ ನಿರ್ಧಾರವಾಯಿತು. ಸರಕಾರಿ ಅಧಿಕಾರಿಗಳು ಸೊರಬಕ್ಕೆ ಬಂದು ಗುಡಿಗಾರರು ಅವರು ಕೆತ್ತಿದ ಕೆಲವಸ್ತುಗಳ ಸಮೇತ ತಮ್ಮನ್ನು ನೋಡಬೇಕೆಂದು ಹೇಳಿ ಕಳುಹಿಸಿದರು. ಅಂತೆಯೇ ಮಣ್ಣಿನ ಗಣೇಶ, ಹಳ್ಳಿ ಮಾರಿಯ ವಿಗ್ರಹ, ದೇವರ ಪ್ರತಿಮೆ, ಕರಂಡಕ ಇತ್ಯಾದಿಗಳಷ್ಟನ್ನೇ ಮಾಡಿಕೊಂಡು ಅನಾಮಧೇಯರಾಗಿದ್ದ ಗುಡಿಗಾರರು ತಾವು ಕೆತ್ತಿದ ವಿಗ್ರಹಗಳ ಜತೆ ಅಧಿಕಾರಿಗಳನ್ನು ಕಂಡರು. ಅಧಿಕಾರಿಗಳು ಗುಡಿಗಾರರ ಕಲಾಕೃತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಅರಮನೆಯ ಮರಗೆಲಸವನ್ನು ಬಾಗಿಲು, ಕಿಟಕಿ, ಬೊಗದಿ, ಕಂಬಗಳನ್ನು ಕೆತ್ತಬಲ್ಲಂತಹ ಪ್ರತಿಭೆ ಇರುವವರನ್ನು ಆಯ್ಕೆ ಮಾಡಿಕೊಂಡರು. ಅಂತಹ ಗುಡಿಗಾರರ ಪಟ್ಟಿಯೊಂದು ಮೈಸೂರಿಗೆ ಹೋಯಿತು. ಕೆಲವೇ ತಿಂಗಳುಗಳಲ್ಲಿ ಈ ಗುಡಿಗಾರರಿಗೆ ಅರಮನೆಯಿಂದ ಕರೆಯೂ ಬಂದಿತು.

ಹೀಗೆ ಮೈಸೂರಿನ ಹೊಸ ಅರಮನೆಯ ಮರ, ದಂತದ ಕಾರ್ಯಗಳನ್ನು ಮಾಡಲೆಂದು ಆಯ್ಕೆಯಾದವರಲ್ಲಿ ಮೊದಲಿಗರು ಮೂಡುಗೋಡು ಹಿರಣ್ಯಪ್ಪನವರು. ಇವರ ಜೊತೆಗೆ ಮರೂರು ಗಣಪತಿಯಪ್ಪ, ಬನವಾಸಿ ರಾಮಚಂದ್ರಪ್ಪ, ಟಿ. ಗಣಪತಿಯಪ್ಪ, ಸಿದ್ದಾಪುರ ವಿಠಲಪ್ಪ, ಪಾಂಡ್ಯಪ್ಪ, ಕೊಟ್ರಪ್ಪ, ದೊಡ್ಡಮನಿ ಪುಟ್ಟಪ್ಪ ಇನ್ನೂ ಹಲವಾರು ಇದ್ದರು.

ಇವರಿಗೆ ವರ್ಷದಲ್ಲಿ ಸುಮಾರು ಎಂಟು ತಿಂಗಳು ಕೆಲಸ. ತಿಂಗಳ ಸಂಬಳ ಜೊತೆಗೆ ಭತ್ಯೆ, ಉಳಿಯಲು ವ್ಯವಸ್ಥೆ ಅರಮನೆಯಿಂದ ಉಳಿದ ಅನುಕೂಲತೆಗಳೂ ಇದ್ದವು.

ಹಿರಣ್ಯಪ್ಪನವರು ಈ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡರು. ಮೈಸೂರು, ಶಿಲ್ಪಗಳಿಗೆ, ಕಲಾವಿದರಿಗೆ ಪ್ರಸಿದ್ಧವಾಗಿತ್ತು. ಅವರ ಸ್ನೇಹ ಇವರಿಗೆ ದೊರೆಯಿತು. ಅಲ್ಲಿ ಶಿಲ್ಪಕಲೆಯನ್ನೇ ಅಲ್ಲದೆ ಮೈಸೂರಿನದೇ ಆದ ಚಿತ್ರಕಲಾ ಸಂಪ್ರದಾಯವನ್ನು ಇವರು ಅಭ್ಯಾಸ ಮಾಡಿದರು.

ಮೈಸೂರು ಅರಮನೆಯ ಕೆಲಸ ಮಾಡುತ್ತ ದಂತದ ಕೆಲವು ಅಮೂಲ್ಯ ಕಲಾ ಕೃತಿಗಳನ್ನು ಮಾಡಿ ಅರಮನೆಗೆ ಕೊಟ್ಟರು.

ದಂತದಲ್ಲಿಯೇ ಎಳೆ ಎಳೆಯಾಗಿ ದಾರ ತೆಗೆದು ಒಂದು ಚವರಿಯನ್ನು ಮಾಡಿಕೊಟ್ಟರು. ಹದಿನಾರು ಪಗಡೆ ಕಾಯಿಗಳ ಒಂದು ಸೆಟ್ಟನ್ನು ದಂತದಲ್ಲಿ ಮಾಡಿಕೊಟ್ಟರು. ಸಣ್ಣ ನಿಂಬೆ ಹಣ್ಣಿನ ಗಾತ್ರದಲ್ಲಿರುವ ಈ ಪಗಡೆ ಕಾಯಿಗಳ ಹೊರಮೈ ಸುತ್ತ ರಾಮಾಯಣದ ದೃಶ್ಯಾವಳಿಗಳನ್ನು ಕೆತ್ತಿದ್ದರು.

ಹಿರಣ್ಯಪ್ಪನವರು ಮೈಸೂರಿನಲ್ಲಿ ಇರುವಾಗಲೇ ಇವರ ಹೆಂಡತಿ ದ್ವಾರಕಮ್ಮ ತೀರಿಕೊಂಡಳು. ಹಿರಣ್ಯಪ್ಪನವರ ಮೊದಲ ಹೆಂಡತಿ ದ್ವಾರಕಮ್ಮನ ತಂಗಿ ಸಾವಿತ್ರಮ್ಮನನ್ನು ಮದುವೆಯಾಗ ಹೊರಟಾಗ ಈ ಸುದ್ದಿ ತಿಳಿದ ಕೃಷ್ಣರಾಜ ಒಡೆಯರ ದೊಡ್ಡಮ್ಮ ಕೆಂಪರಾಜಮ್ಮಣ್ಣಿ ಅವರು ಇವರಿಗೆ ಒಂದು ಬಂಗಾರದ ಪವನು ಕೊಟ್ಟರು.

ಹಿರಣ್ಯಪ್ಪನವರು, ಉಳಿದ ಗುಡಿಗಾರರು ಮೈಸೂರು ಅರಮನೆ ಕೆಲಸ ಮುಗಿಸಿಕೊಂಡು ಊರಿಗೆ ತಿರುಗಿಬಂದರೂ ಅರಮನೆಯ ಜೊತೆಗಿನ ಇವರ ಸಂಪರ್ಕ ಮುಂದುವರಿಯಿತು.

ಅರಮನೆಯಲ್ಲಿ ಕೊಟ್ಟ ಪೇಟ, ಕೋಟು, ಕಮ್ಮರಬಂದಗಳನ್ನು ಇವರು ಕೊನೆಯ ತನಕ ತುಂಬ ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದರು. ಈ ಕೋಟು, ಪೇಟ, ಸೊರಬ ಸೀಮೆ ಗುಡಿಗಾರರ ಪಾಲಿಗೆ ಹೆಮ್ಮೆ, ಗೌರವದ ಸಂಕೇತವಾಗಿಯೂ ಉಳಿದಿತ್ತು. ಗುಡಿಗಾರರಲ್ಲಿ ಎಲ್ಲೇ ಮದುವೆಯಾಗಲಿ, ವರ ಈ ಕೋಟು, ಪೇಟ ಧರಿಸಿಯೇ ಹೋಗುತ್ತಿದ್ದ ಎಂದರೆ ಆಶ್ಚರ್ಯವಾಗಬಹುದು. ಆದರೆ ಈ ಅರಮನೆ ದಿರಿಸಿಗೆ ಅಷ್ಟೊಂದು ಗೌರವವಿತ್ತು.

ಅನಂತರ ಕೂಡ ಹಿರಣ್ಯಪ್ಪನವರು ಅರಮನೆಗೆ ಹಲವು ದಂತದ ಫಲಕಗಳನ್ನು ಮಾಡಿಕೊಟ್ಟರು. ಇವರು ಮುಡುಗೋಡಿನಲ್ಲಿ ಇದ್ದುಕೊಂಡೇ ಕಾಗದದ ಮೇಲೆ, ರಟ್ಟಿನ ಮೇಲೆ ಕೆಲ ನಕ್ಷೆಗಳನ್ನು ಬರೆದು ಅರಮನೆಗೆ ಕಳುಹಿಸುತ್ತಿದ್ದರು. ಈ ನಕ್ಷೆ, ಚಿತ್ತಾರಗಳನ್ನು ಮಹಾರಾಜರು ಪರಿಶೀಲಿಸಿ, ಅವರಿಗೆ ಒಪ್ಪಿಗೆಯಾದಲ್ಲಿ ಇವರಿಗೆ ಪತ್ರ ಮುಖೇನ ತಿಳಿಸುತ್ತಿದ್ದರು. ಹಾಗೂ ಈ ಪ್ಯಾನಲ್ಲುಗಳಿಗೆ ಬೇಕಾದ ಆರು ಅಂಗುಲ ಉದ್ದ, ನಾಲ್ಕು ಅಂಗುಲ ಅಗಲ ಒಂದು ಅಂಗುಲ ದಪ್ಪದ ದಂತವನ್ನು ಬೆಂಗಳೂರಿನಲ್ಲಿದ್ದ ಮೈಸೂರು ಕೈಗಾರಿಕೆಗೆ ಮತ್ತು ವಾಣಿಜ್ಯ ಇಲಾಖೆ ಮೊಖ್ತೇ ಆಗುತ್ತಿತ್ತು. ಅರಮನೆಗಾಗಿ ಈ ಬಗೆಯ ಹಲವು ಪ್ಯಾನಲ್‌ಗಳನ್ನು ಹಿರಣ್ಯಪ್ಪನವರು ಮಾಡಿಕೊಟ್ಟರು. ಇದಕ್ಕೆ ಸೂಕ್ತ ಸಂಭಾವನೆಯೂ ಅವರಿಗೆ ಸಂದಾಯವಾಗುತ್ತಲಿತ್ತು.

ಈ ಬಗ್ಗೆ ನಡೆದಿರುವ ಪತ್ರ ವ್ಯವಹಾರವನ್ನು ಗಮನಿಸಿ ಹೇಳುವುದಾದರೆ ಅರಮನೆಯಿಂದ ಹಲವು ಒತ್ತಾಯದ ಬೇಡಿಕೆಗಳು, ಕೂಡಲೇ ಕೆಲಸ ಮಾಡಿ ಕೊಡುವಂತೆ ಕೋರಿಕೆ ಹಿರಣ್ಯಪ್ಪನವರಿಗೆ ಬರುತ್ತಿತ್ತು ಈ ಪ್ಯಾನಲ್‌ಗಳನ್ನು ದಸರಾ ಸಂದರ್ಭದಲ್ಲಿ ಬರುವ ವಿಶೇಷ ಅತಿಥಿಗಳಿಗೆ, ವಿದೇಶಿ ಪ್ರಮುಖರಿಗೆ ಅರಮನೆಯಿಂದ ನೆನಪಿನ ಕಾಣಿಕೆಯಾಗಿ ಕೊಡಲಾಗುತ್ತಿತ್ತು.

ಅರಮನೆಗಾಗಿ ಹಿರಣ್ಯಪ್ಪನವರು ರಾಮ ಲಕ್ಷ್ಮಣ, ಸೀತಾ ಪಂಚಾಯತನ, ಶಿವ ಪಂಚಾಯತನ, ಕಾಳಿಂಗ ಮರ್ದನಕೃಷ್ಣ, ಶಿವ ತಾಂಡವ ನೃತ್ಯ, ಇನ್ನೂ ಹಲವು ನಕ್ಷೆಗಳನ್ನು, ವಿನ್ಯಾಸಗಳನ್ನು ದಂತದಲ್ಲಿ ಮಾಡಿಕೊಟ್ಟದ್ದುಂಟು. ಗುಡಿಗಾರರು ತಾವು ಮಾಡಿದ ಕಲಾಕೃತಿಗಳ ಕೆಳಗೆ ತಮ್ಮ ಹೆಸರನ್ನು ಹಾಕುವ ಪದ್ಧತಿ ಹಿಂದೂ ಇರಲಿಲ್ಲ ಈಗಲೂ ಇಲ್ಲ. ಹೀಗಾಗಿ ಹಿರಣ್ಯಪ್ಪನವರ ಕಲಾಕೃತಿಗಳು ಎಲ್ಲಿವೆ? ಅವು ಯಾವುವು ಎಂಬುದನ್ನು ಕಂಡು ಹಿಡಿಯುವುದು ಈಗ ಕಷ್ಟವಾಗಿದೆ.

1930ರ ಸುಮಾರಿಗೆ ಇವರ ಇರಾಣಪುರದ ಹದಿನೆಂಟು ಎಕರೆ ಜಮೀನು ಹರಾಜಿಗೆ ಬಂದದ್ದು ಒಂದು ವಿಚಿತ್ರ. ಇದನ್ನು ಮಾಡಿಕೊಂಡು ಬರುತ್ತಿದ್ದ ರೈತ ಇದಕ್ಕೆ 9 ವರ್ಷಗಳಿಂದ ಕಂದಾಯವನ್ನೇ ಕಟ್ಟದ್ದರಿಂದ ಇದು ಹರಾಜಿಗೆ ಬಂದಿತು. ಹಿರಣ್ಯಪ್ಪನವರು ಈ ವಿಷಯದಲ್ಲಿ ಸರಕಾರಕ್ಕೆ ಬರೆದುಕೊಂಡಿದ್ದರಿಂದ ಸರಕಾರ ವಿಧಿಸಿದ ಒಂಬೈನೂರು ರೂ. ಕಂದಾಯವನ್ನು ಇನ್ನೂರು ರೂ.ಗೆ ಇಳಿಸಿ, ಹಿರಣ್ಯಪ್ಪನವರಿಗೆ ಇಷ್ಟು ಹಣವನ್ನು ಕಟ್ಟಲು ತಿಳಿಸಿತು.

ಮಲೆನಾಡಿನ ಈ ಕಲಾವಿದ ಮೈಸೂರಿಗೆ ಹೋಗಿ ಬಂದದ್ದೇ ಅಲ್ಲದೆ ಮಲೆನಾಡಿನಲ್ಲಿಯೇ ತನ್ನ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತಹ ಇನ್ನೊಂದು ಕೆಲಸವನ್ನು ಮಾಡಿದ. ಅದು ರಾಮಚಂದ್ರಾಪುರ ಮಠದ ದಂತದ ಸಿಂಹಾಸನದ ನಿರ್ಮಾಣ.

ದಂತದ ಸಿಂಹಾಸನ

ಶಿವಮೊಗ್ಗ ಜಿಲ್ಲೆಯ ಶ್ರೀ.ರಾಮಚಂದ್ರಾಪುರ ಮಠವು ಹವ್ಯಕ ಜನಾಂಗದವರ ಮಠ ಶ್ರೀ ರಾಮಚಂದ್ರ ಭಾರತೀ ಸ್ವಾಮಿಗಳು ಈ ಮಠದಲ್ಲಿ 1898ರಲ್ಲಿ ಆಶ್ರಮ ದೀಕ್ಷೆಯನ್ನು ಪಡೆದು ಹವ್ಯಕ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ಇವರು ಶ್ರೀ ಮಠದ 34ನೇ ಗುರುಗಳು. ಇವರ ಕಾಲದಲ್ಲಿ ಮಠದ ಅಧಿಕಾರಿಗಳಲ್ಲಿ ಪ್ರಮುಖರಾಗಿದ್ದ ಹೊಸಬಾಳೆ ಪುಟ್ಟಪ್ಪ ಸಹೋದರರು ಹಿರಣ್ಯಪ್ಪನವರ ಮೂಲಕ ದಂತದ ಸಿಂಹಾಸನವನ್ನು ಮಾಡಿಸಿದರು.

ಮೂಡುಗೋಡು ಹಿರಣ್ಯಪ್ಪನವರ ನೇತೃತ್ವದಲ್ಲಿ ಈ ಸಿಂಹಾಸನವನ್ನು ಮಾಡಿದವರು ಬನವಾಸಿ ರಾಮಚಂದ್ರಪ್ಪ, ಮರೂರು ಗಣಪತಿಯಪ್ಪ, ಕೆರೋಡಿ ಗಣಪತಿಯಪ್ಪ, ಚಿಕ್ಕಪ್ಪ, ದೊಡ್ಡಣ್ಣಪ್ಪ ಮೊದಲಾದವರು ಈ ಸಿಂಹಾಸನವನ್ನು ಮಾಡಿ ಮುಗಿಸಲು ತೆಗೆದುಕೊಂಡ ಅವಧಿ ಸುಮಾರು ಹದಿನೆಂಟು ವರ್ಷ. ಮೂಡುಗೋಡಿನ ಹಿರಣ್ಯಪ್ಪನವರ ಮನೆಯಲ್ಲಿಯೇ ಸಿಂಹಾಸನದ ಕೆಲಸ ಆರಂಭವಾಗಿ ಸುಮಾರು ಎಂಟು ವರ್ಷ ಇಲ್ಲಿಯೇ ಇದು ಮುಂದುವರಿಯಿತು. ಇಲ್ಲಿ ಹೀಗೊಂದು ಸಿಂಹಾಸನ

ಸಿದ್ಧವಾಗುತ್ತಿದೆ ಎಂಬ ಸುದ್ದಿ ಕೇಳಿದ ಉನ್ನತ ಅಧಿಕಾರಿಗಳು ಮೂಡುಗೋಡಿಗೆ ನಡೆದುಕೊಂಡೇ ಬಂದು ಸಿಂಹಾಸನದ ಕೆಲಸ ಕಾರ್ಯಗಳನ್ನು ನೋಡಿಕೊಂಡು ಹೋಗುತ್ತಿದ್ದರು.

ದಂತವನ್ನು ತರುವುದೇ ಮೊದಲಾದ ಕೆಲಸಗಳು ಕಷ್ಟಕರವಾದುದರಿಂದ ನಂತರ ಸಿಂಹಾಸನದ ಕಾರ್ಯ ಸೊರಬದಲ್ಲಿ ಪುಟ್ಟಪ್ಪನವರ ಮನೆಯ ಮಹಡಿಯ ಮೇಲೆ ಮುಂದುವರಿಯಿತು ಶ್ರೀ ಹೊಸಬಾಳೆ ಪುಟ್ಟಪ್ಪನವರು ಅಕಾಲ ಮೃತ್ಯುವಿಗೆ ತುತ್ತಾದುದರಿಂದ ಇವರ ಸಹೋದರರಾದ ಶ್ರೀ ಹೊಸಬಾಳೆ ಸುಬ್ಬರಾಯರು ಸಿಂಹಾಸನವನ್ನು ಪೂರ್ಣಗೊಳಿಸಿ ಮಠಕ್ಕೆ ಅರ್ಪಿಸಿದರು. ಶ್ರೀರಾಮಚಂದ್ರ ಭಾರತೀ ಸ್ವಾಮಿಗಳು ಗೋಕರ್ಣದ ಮಹಾಬಲೇಶ್ವರನ ಸನ್ನಿಧಿಯಲ್ಲಿ 27-2-1949ರಂದು ಈ ಸಿಂಹಾಸನಾರೋಹಣವನ್ನು ಮಾಡಿದರು.

ಕಲಾಕೃತಿ

ಈ ಸಿಂಹಾಸನದ ರೇಖಾವಿನ್ಯಾಸವನ್ನು ಸಿದ್ಧ ಪಡಿಸಲು ಹಿರಣ್ಯಪ್ಪನವರು ತೆಗೆದುಕೊಂಡ ಅವಧಿ ಎರಡು ವರ್ಷ ಅನಂತರ ದಂತದ ಫಲಕಗಳನ್ನು ಜಾಲಂದ್ರಗಳಂತೆ ಕೊರೆದು ಅವುಗಳಲ್ಲಿ ಪೌರಾಣಿಕ ಪ್ರಸಂಗಗಳನ್ನು ಮೂಡಿಸುವ ಸೂಕ್ಷ್ಮ ಕೆಲಸ ನಿಧಾನವಾಗಿ ಮುಂದುವರೆಯಿತು. ಮಠದಲ್ಲಿ ಸಂಗ್ರಹಿಸಿ ಇಡಲಾಗಿದ್ದ ಆರು ಆನೆಗಳ ದಂತಗಳಿಂದ ಇನ್ನೂರು ಕೆ.ಜಿ. ದಂತವನ್ನು ಈ ಸಿಂಹಾಸನಕ್ಕೆಂದು ಬಳಸಿಕೊಳ್ಳಲಾಯಿತು.

ಬೇಕಾದ ಆಕಾರದ ಫಲಕಗಳನ್ನು ತೆಗೆದುಕೊಂಡು ಆದನಂತರ ಉಳಿದ ದಂತದ ತುಂಡುಗಳಿಂದ ಹಲವಾರು ಬಗೆಯ ವಿಗ್ರಹಗಳನ್ನು, ಕಲಾಕೃತಿಗಳನ್ನು, ಬಾಚಣಿಗೆ, ಭರಣಿ, ಬಟ್ಟಲು, ಕರಂಡಕ ಇತ್ಯಾದಿಗಳನ್ನು ಗುಡಿಗಾರರು ಮಾಡುತ್ತಿದ್ದರು. ದಂತ ಬೆಲೆ ಬಾಳುವ ವಸ್ತುವಾಗಿದ್ದರಿಂದ ಇದರಲ್ಲಿ ರಚಿಸಿದ ಕಲಾಕೃತಿಗೆ ಒಳ್ಳೆಯ ಬೇಡಿಕೆ ಇತ್ತು. ಒಂದು ಕಡೆ ಸಿಂಹಾಸನದ ರಚನೆ, ಇನ್ನೊಂದು ಕಡೆ ಸಣ್ಣ ಪುಟ್ಟ ಕಲಾಕೃತಿಗಳ ರಚನೆ ಇಲ್ಲಿ ಹದಿನೆಂಟು ವರ್ಷಗಳ ಕಾಲ ನಡೆಯಿತು. ಸಿಂಹಾಸನದ ನಿರ್ಮಾಣ ನೋಡಲು ಬರುವವರ, ಕೊಳ್ಳಲು ಬರುವವರ ಯಾತ್ರ ಸ್ಥಳವಾಯಿತು ಈ ಮನೆ. ಮೂಡುಗೋಡು ಹಿರಣ್ಯಪ್ಪನವರು ಕರ್ನಾಟಕದ ಎಲ್ಲ ಶಿಲ್ಪ ಸಂಪ್ರದಾಯಗಳನ್ನು

ಬಲ್ಲವರಾಗಿದ್ದರೂ ಇವರು ಹೊಯ್ಸಳ ಶೈಲಿಯನ್ನು ತಮ್ಮ ಕಲಾಕೃತಿಗಳಲ್ಲಿ ಮೈಗೂಡಿಸಿಕೊಂಡಿದ್ದರು. ಜೊತೆಗೆ ಮೈಸೂರಿನ ಸಾಂಪ್ರದಾಯಿಕ ಶೈಲಿಯನ್ನು ಮೇಳೈಸಿ ತಮ್ಮದೇ ಆದ ಶೈಲಿಯನ್ನು ರೂಢಿಸಿಕೊಂಡಿದ್ದರು. ಈ ಸಿಂಹಾಸನದಲ್ಲಿ ಇದೇ ಶೈಲಿಯನ್ನು ಅವರು ಬಳಸಿಕೊಂಡರು.

ಸಿಂಹಾಸನ ಕೆಳಗೆ ಚೌಕಾಕಾರದಲ್ಲಿದೆ. ನಡುವಿನ ಪೀಠವು ಅಷ್ಟ ಮುಖಗಳನ್ನು ಹೊಂದಿದೆ ಪೀಠದ ಹಿಂಬದಿಯಲ್ಲಿ ಪ್ರಭಾವಳಿ. ಮೇಲೆ ಶ್ವೇತಛತ್ರಿ. ಪ್ರಭಾವಳಿಯ ಮೇಲ್ ಬದಿಯಲ್ಲಿ ಸಿಂಹಲಲಾಟ. ನಾಲ್ಕು ಸಿಂಹಗಳೇ ಪಾದಗಳಾಗಿ ಸಿಂಹಾಸನವನ್ನು ಹೊತ್ತು ಕುಳಿತಿರುವುದೊಂದು ಸೊಬಗು. ಸಿಂಹಾಸನದ ಗೋಚರಿಸುವ ಮುಖ್ಯ ಭಾಗ ಮಾತ್ರ ದಂತದ ಫಲಕಗಳಿಂದ ಕೂಡಿದೆ. ಹಿಂಬದಿಯಲ್ಲಿ ಬೀಟೆ ಮರವನ್ನು ಉಪಯೋಗಿಸಲಾಗಿದೆ.

ದಂತವನ್ನು ಜಾಲಂದ್ರದಂತೆ ಕೆತ್ತಿದ್ದು ಪ್ರತಿ ದಂತದ ಫಲಕದ ಹಿಂದೆಯೂ ಬಂಗಾರದ ಮುಲಾಮು ಬಳಿದಿರುವ ಲೋಹದ ತಗಡುಗಳನ್ನು ಕೂರಿಸಿರುವುದರಿಂದ ಬಂಗಾರದ ಬಣ್ಣದ ಹಿನ್ನಲೆಯಲ್ಲಿ ದಂತದಲ್ಲಿ ಬರೆಯಲಾಗಿರುವ ಚಿತ್ರಗಳು ಎದ್ದು ಕಾಣುತ್ತವೆ ಜೊತೆಗೆ ಪಚ್ಚೆಯ ಹರಳುಗಳನ್ನು ಅಲ್ಲಲ್ಲಿ ಬಳಸಿರುವುದೊಂದು ವಿಶೇಷ. ಸಿಂಹಾಸನದ ಕೆಳಗಿರುವ ಸಿಂಹಗಳ ಕಣ್ಣುಗಳಲ್ಲಿ ಪಚ್ಚೆ ಕಲ್ಲುಗಳನ್ನು ಕೂರಿಸಿದೆ.

ಸಿಂಹಾಸನದ ಕೆಳಗಿನ ಪೀಠಗಳಲ್ಲಿ ಮಹಾಭಾರತಕ್ಕೆ ಸಂಬಂಧಪಟ್ಟ 32 ಫಲಕಗಳಿವೆ. ಹತ್ತು ಅವತಾರಗಳು, ಗಣೇಶ, ಋಷಿಗಳು, ಶಿವ ಪಂಚಾಯತನ, ವಿಷ್ಣು ಪಂಚಾಯತನಗಳು ಇಲ್ಲಿವೆ. ದ್ವಾರಪಾಲಕರು, ಬಗೆಬಗೆಯ ನಕ್ಷೆಗಳು, ಪ್ರಾಣಿ ಪಕ್ಷಿಗಳನ್ನು ಇಲ್ಲಿ ವಿವರವಾಗಿ ಕೆತ್ತಲಾಗಿದೆ. ಪೀಠದ ನಡುವಣ ಭಾಗದಲ್ಲಿಯ ಏಳು ಫಲಕಗಳಲ್ಲಿ ಕರ್ಣಾರ್ಜುನರ ಯುದ್ಧ ಕೌರವನ ಆಸ್ಥಾನ, ಚಕ್ರವ್ಯೂಹ, ಮೊದಲಾದ ಸಂದರ್ಭಗಳನ್ನು ಸೂಕ್ಷ್ಮಾತಿ ಸೂಕ್ಷ್ಮವಾಗಿ ಕೆತ್ತಲಾಗಿದೆ. ವ್ಯಕ್ತಿಗಳ ಭಾವಭಂಗಿ, ನಿಲುವು, ರಥ, ಕುದುರೆಗಳ ಸಹಜ ಚಲನೆ, ಬಾಣ ಬಿಲ್ಲುಗಳನ್ನು ಹಿಡಿದಿರುವ ಸೊಬಗು ಫಲಕಗಳ ತುಂಬೆಲ್ಲ ಹರಡಿಕೊಂಡಿದೆ.

ಸಿಂಹಾಸನದ ಪ್ರಭಾವಳಿಯಲ್ಲಿ ಹದಿನೈದು ಫಲಕಗಳನ್ನು ಅರ್ಧಚಂದ್ರಾಕಾರದಲ್ಲಿ

ಕೊರೆದಿದೆ. ಈ ಫಲಕಗಳಲ್ಲಿ ರಾಮಾಯಣ, ಉತ್ತರ ರಾಮಾಯಣ ಎರಡೂ ಸೇರಿಕೊಂಡಿವೆ. ಇಲ್ಲಿ ಕತೆ ಕ್ರಮಬದ್ಧವಾಗಿ ಸಾಗುವಂತೆ ಸಂಪೂರ್ಣ ರಾಮಾಯಣದ ಪ್ರಮುಖ ದೃಶ್ಯಾವಳಿಗಳನ್ನು ಕಲಾವಿದ ಜೋಡಿಸಿದ್ದಾನೆ.

ಶ್ರೀ ರಾಮ ಜನನ ಸೀತಾಸ್ವಯಂವರ, ಗುಹ ಸೀತಾರಾಮ ಲಕ್ಷ್ಮಣರನ್ನು ನದಿ ದಾಟಿಸಿದ್ದು ಲಕ್ಷ್ಮಣನಿಂದ ಶೂರ್ಪನಖಿಯ ಅವಮಾನ, ವಾಲಿವಧೆ, ಸೇತು ಬಂಧನ, ರಾಮ ರಾವಣ ಯುದ್ಧ, ಪ್ರಭಾವಳಿಯ ನಡುವೆ ಶ್ರೀ ರಾಮ ಪಟ್ಟಾಭಿಷೇಕ. ನಂತರ ಉತ್ತರ ರಾಮಾಯಣ. ರಾಮ ಸೀತೆಯೊಡನೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯೆಗೆ ಹೊರಟಿರುವುದು ಲವಕುಶ ಜನನ, ಅಶ್ವಮೇಧ ಯಾಗ, ಶ್ರೀರಾಮ ಲವ ಕುಶ ಭೇಟಿ, ರಾಮ ಸೀತೆಯರ ಭೇಟಿ ಸೀತೆ ಭೂಗರ್ಭದಲ್ಲಿ ಐಕ್ಯವಾಗುವುದು ಹೀಗೆ ಇಲ್ಲಿಯ ಫಲಕಗಳು ಸಂಪೂರ್ಣ ರಾಮಾಯಣವನ್ನು ಚಿತ್ರಿಸುತ್ತವೆ. ಇಲ್ಲಿ ಕೂಡ ಕಲಾವಿದ ನೀಡಿರುವ ವಿವರಗಳು ಅದ್ಭುತ. ಪ್ರತಿಫಲಕದ ಮೇಲೂ ಫಲಕದಲ್ಲಿ ಕೆತ್ತಲಾಗಿರುವ ಸಂದರ್ಭಗಳ ವಿವರಣೆ ಇದೆ.

ಸಮಾರು ಒಂಬತ್ತು ಅಡಿ ಎತ್ತರದ ಸಿಂಹಾಸನದ ಮೇಲೆ ಬೆಳ್ಳಿದಂಡವಿರುವ ರೇಶಿಮೆ ವಸ್ತ್ರದ ಶ್ವೇತಛತ್ರಿ ಇದೆ. ಮುತ್ತುಗಳನ್ನು ಪೋಣಿಸಿದ ತೋರಣ ಈ ಛತ್ರಿಗೆ ತೂಗು ಬಿದ್ದಿದೆ.

ದಂತದಲ್ಲಿ ಕೆತ್ತಿದ, ಜೊತೆಗೆ ಚಿನ್ನ, ಬೆಳ್ಳಿ, ಮುತ್ತು, ಹವಳ ಇತ್ಯಾದಿಗಳಿಂದ ಸಜ್ಜುಗೊಳಿಸಲಾದ, ಕಲೆಯ ದೃಷ್ಟಿಯಿಂದಲೂ ಅಷ್ಟೇ ಶ್ರೀಮಂತವಾದ ಈ ಸಿಂಹಾಸನದಂತಹ ಮತ್ತೊಂದು ಕೃತಿ ಅಲಭ್ಯ ಎಂದು ಹೇಳುವ ಮಾತು ಉತ್ಪ್ರೇಕ್ಷೆಯದಲ್ಲ.

ಪ್ರದರ್ಶನ

ಈ ಸಿಂಹಾಸನದ ಪ್ರಥಮ ಪ್ರದರ್ಶನ ಸೊರಬದಲ್ಲಿಯೇ ನಡೆಯಿತು. ಸುಮಾರು ಒಂದು ತಿಂಗಳವರೆಗೆ ಸಹಸ್ರ ಸಹಸ್ರ ಜನ ಬಂದು ಇದನ್ನು ನೋಡಿಕೊಂಡು ಹೋಗುತ್ತಿದ್ದರು. ದಿನವೊಂದಕ್ಕೆ ಸಿಂಹಾಸನದ ಮುಂದೆ ಬೀಳುತ್ತಿದ್ದ ಹಣ ಮೂನ್ನೂರು ರೂಪಾಯಿಗೂ ಹೆಚ್ಚು ಇರುತ್ತಿತ್ತು.

ಗೋಕರ್ಣದ ರಘೋತ್ತಮ ಮಠದಲ್ಲಿಯೂ ಈ ಸಿಂಹಾಸನದ ಪ್ರದರ್ಶನವಾಯಿತು. ಹೊಸನಗರದ ರಾಮಚಂದ್ರಾಪುರ ಮಠದಲ್ಲಿ, ಮೈಸೂರು ಅರಮನೆಯಲ್ಲಿ, ಮೈಸೂ ದಸರಾ ವಸ್ತು ಪ್ರದರ್ಶನದಲ್ಲಿ, ಅಜಂತಾ, ದೆಹಲಿಗಳಲ್ಲಿ, ತಮಿಳುನಾಡಿ ಹರಿಹರಪುರದಲ್ಲಿ, ಸಾಗರ, ಶಿರಸಿ, ಸಿದ್ದಾಪುರಗಳಲ್ಲಿ ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಹತ್ತಿರದ ಮಾಣಿ ಎಂಬ ಹಳ್ಳಿಯಲ್ಲಿ ಈ ಸಿಂಹಾಸನವನ್ನು ಸಾರ್ವಜನಿಕ ಪ್ರದರ್ಶನಕ್ಕಾಗಿ ಇಡಲಾಗಿತ್ತು. ಇದೀಗ ಸಿಂಹಾಸನ ಹೊಸನಗರ (ಶಿವಮೊಗ್ಗ ಜಿಲ್ಲೆ)ದ ರಾಮಚಂದ್ರಾಪುರದ ಮಠದಲ್ಲಿದೆ. ಇದನ್ನು ಅಲ್ಲಿಯೇ ವ್ಯವಸ್ಥಿತವಾಗಿ ಪ್ರದರ್ಶನಕ್ಕೆ ಇಡುವ ವಿಚಾರ ಮಠದ ಅಧಿಕಾರಿಗಳಿಗೆ ಇದೆ. ಇಂದು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಈ ಆಸ್ತಿ ಕರ್ನಾಟಕದ ಆಸ್ತಿಯೂ ಹೌದು. ಇದು ಕರ್ನಾಟಕದ ಗುಡಿಗಾರರು, ಕಲಾವಿದರು ಹೆಮ್ಮೆ ಪಡುವಂತಹ ಕಲಾಕೃತಿಯೂ ಹೌದು.

ಅರಮನೆ ಗುರುಮನೆಗಾಗಿ ದುಡಿದ ಹಿರಣ್ಯಪ್ಪ ಅಂತ್ಯಕಾಲದಲ್ಲಿ ಬಡತನದಲ್ಲಿ ಬೇಯ ಬೇಕಾಯಿತು. ಇವರ ಎರಡನೇ ಹೆಂಡತಿಯಿಂದ ಓರ್ವ ಮಗನನ್ನು ಪಡೆದರಾದರೂ ಈತನ ಆರೋಗ್ಯ ಕೂಡ ಸರಿ ಇರಲಿಲ್ಲ. ದಂತದ ಸಿಂಹಾಸನದ ಕೆಲಸ ಮುಗಿದ ನಂತರವೂ ಅರಮನೆಗಾಗಿ ದಂತದ ಕೆಲಸವನ್ನು ಮಾಡಿ ಕೊಡುತ್ತಲಿದ್ದರೂ ಇವರ ಬಡತನ ಹಿಂಗಲಿಲ್ಲ. ಇವರದಾಗಿದ್ದ ಜಮೀನು ಕೈ ಬಿಟ್ಟು ಹೋಗಿತ್ತು. ಆದರೂ ಇವರ ಕಲಾಸೇವೆ ಮುಂದುವರಿದಿತ್ತು. ಮಲೆನಾಡಿನ ಶ್ರೀಮಂತರಿಗೆ ಹಲವು ಗಂಧದ ದಂತದ ವಸ್ತುಗಳನ್ನು ಮಾಡಿಕೊಟ್ಟರು. ಈಗಲೂ ಮಲೆನಾಡಿನ ಹಲವು ಮನೆಗಳಲ್ಲಿ ಸಾಗರ, ಸೊರಬ, ಶಿವಮೊಗ್ಗಗಳಲ್ಲಿ ಇವರು ಮಾಡಿದ ಗಂಧದ ಬೀಸಣಿಗೆ, ಕರಂಡಕ, ಪ್ಯಾನಲ್‌ಗಳು, ಮಂಟಪಗಳು ದಂತದ ಗೋಪಾಲಕೃಷ್ಣ, ದತ್ತಾತ್ರೇಯ ಮೊದಲಾದ ವಿಗ್ರಹಗಳು ಕಾಣ ಸಿಗುತ್ತವೆ. ಹೀಗೆ ಲಭ್ಯವಾಗಿರುವ ದಂತದ ಕಲಾಕೃತಿಗಳಲ್ಲಿ ಒಂದು ಫೋಟೋ ಫ್ರೇಮು ಕೂಡ ಕೆತ್ತನೆಯ ದೃಷ್ಟಿಯಿಂದ ಅಪೂರ್ವವಾದದ್ದು.

ಶಿವಮೊಗ್ಗದ ವಸ್ತು ಪ್ರದರ್ಶನಾಲಯದಲ್ಲಿ ಮೂಡುಗೋಡು ಹಿರಣ್ಯಪ್ಪನವರು ಕೆತ್ತಿರುವ ಕೆಲವು ಶ್ರೀ ಗಂಧದ ವಸ್ತುಗಳನ್ನು ನೋಡಬಹುದು. ಈ ವಸ್ತುಗಳಲ್ಲಿ ಕೆಲವು ಅಪೂರ್ಣವಾದವುಗಳು ಕೂಡ ಇವೆ. ಈ ಕಲಾಕೃತಿಗಳ ಜತೆ ಹಿರಣ್ಯಪ್ಪನವರ ಭಾವಚಿತ್ರವನ್ನು ಕೂಡ ಇರಿಸಲಾಗಿದೆ.

ಅಂತಿಮ ದಿನಗಳು

1943ನೇ ವರ್ಷ. ಹಿರಣ್ಯಪ್ಪನವರ ದೈವಭಕ್ತಿ, ದೇವರ ಪೂಜೆ ಕಡಿಮೆಯಾಗಿರಲಿಲ್ಲ. ಯುಗಾದಿ ಹಬ್ಬದಂದು ದೇವರ ಪೂಜೆ ಮಾಡಿ ಮಲಗಿದ್ದವರು ಮೇಲೆ ಏಳಲಿಲ್ಲ. ಇವರ ಎರಡನೇ ತಂಗಿ ಚೌಡಮ್ಮನವರ ಮಗ ಶಾಂತಪ್ಪ ಚಿಕ್ಕಂದಿನಿಂದ ಇವರ ಬಳಿಯೇ ಇದ್ದು ಇವರ ಸೇವೆ ಮಾಡುತ್ತಿದ್ದವರು ವೈದ್ಯರನ್ನು ಕರೆತಂದರೂ ಉಪಯೋಗವಾಗಲಿಲ್ಲ. ಗುಡಿಗಾರರ ಆಚಾರ್ಯ ಪುರುಷರಂತಿದ್ದ ಮೂಡುಗೋಡು ಹಿರಣ್ಯಪ್ಪನವರು ತಮ್ಮ 76ನೇ ವಯಸ್ಸಿನಲ್ಲಿ ಕಾಲವಶರಾದರು.


ಶ್ರೀ . ಕೆ. ಜಿ. ಶಾಂತಪ್ಪನವರು, ಹಿರಣ್ಯಪ್ಪನವರ ಮೂರನೇ ತಂಗಿ ಗಂಗಮ್ಮನವರ ಮಗ, ಗುಡಿಗಾರ ಚಿಕ್ಕಣ್ಣ, ಕೊನೆಯ ತಂಗಿ ವರದಮ್ಮನವರ ಮಗ, ಜಡೆ ಮಂಜುನಾಥಪ್ಪ, ಇವರೆಲ್ಲ ಹಿರಣ್ಯಪ್ಪನವರ ಪ್ರಭಾವದಲ್ಲಿ ಬೆಳೆದವರು. ಹಿರಣ್ಯಪ್ಪನವರ ಮಾರ್ಗದರ್ಶನದಲ್ಲಿ ಅರಮನೆಯಲ್ಲಿ ಕೆಲಸ ಮಾಡಿದವರು, ದಂತದ ಸಿಂಹಾಸನದ ಕೆಲಸ ಮಾಡಿದವರು, ಹಿರಣ್ಯಪ್ಪನವರ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು.

ಈಗ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಅಶೋಕ ಗುಡಿಗಾರ ಮೂಡುಗೋಡು ಹಿರಣ್ಯಪ್ಪನವರ ತಂಗಿಯ ಮೊಮ್ಮಗ, ದಿ॥ ಗುಡಿಗಾರ ಚಿಕ್ಕಣ್ಣನವರ ಮಗ.


ಮೂಡುಗೋಡು ಹಿರಣ್ಯಪ್ಪನವರು ಪ್ರತಿ ದಸರೆಗೂ ಮೈಸೂರಿಗೆ ಹೋಗಿ ಕೃಷ್ಣರಾಜ ಒಡೆಯರಿಂದ ಸನ್ಮಾನಿತರಾಗಿ ಬರುತ್ತಿದ್ದರು. ಅರಮನೆ ಸಮೀಪವರ್ತಿಗಳಾಗಿದ್ದ ದಿ॥ ಜೆ.ಬಿ. ಮಲ್ಲಾರಾಧ್ಯರಿಗೆ ಹಿರಣ್ಯಪ್ಪನವರ ಮೇಲೆ ತುಂಬಾ ಅಭಿಮಾನವಿತ್ತು. ಹಿರಣ್ಯಪ್ಪನವರ ಮೂಲಕ ಅರಮನೆಗೆ ಸಾಕಷ್ಟು ಕೆಲಸಗಳನ್ನು ಮಾಡಿಸಿ ಕೊಟ್ಟವರೇ ಮಲ್ಲಾರಾಧ್ಯರು. ಇಷ್ಟಾದರೂ ಗುಡಿಗಾರರ ಜನಾಂಗದಲ್ಲಿ ಮತ್ತೊರ್ವ ಹಿರಣ್ಯಪ್ಪ ಹುಟ್ಟಲಿಲ್ಲ ಎಂಬುದು ಕೂಡ ನಾವು ಒಪ್ಪಿಕೊಳ್ಳಬೇಕಾದ ಸತ್ಯ.

ಗ್ರಂಥಋಣ


1. ಶ್ರೀ ಗುರುಮಠದ ಇತಿಹಾಸ. ವೈದ್ಯ. ಗ.ಸು. ಪಾಟೀಲ, ಬರಿಗೆ.
2. ಮೈಸೂರು ಗೆಜೆಟಿಯರ್.
3 ಕರ್ನಾಟಕ ವಸ್ತು ವಿಷಯ ಕೋಶ.
4. ಅರಮನೆ ಪರವಾಗಿ ದಿ॥ ಜೆ.ಬಿ. ಮಲ್ಲಾರಾಧ್ಯರು ಹಾಗೂ ಮೂಡುಗೋಡು ಹಿರಣ್ಯಪ್ಪನವರ ನಡುವೆ ನಡೆದ ಪತ್ರ ವ್ಯವಹಾರ.
5. ಇತರೆ ಬಿಡಿ ಲೇಖನಗಳು.




ಫೋಟೋ ಫ್ರೇಮ್.
PHOTO FRAME.




ಫೋಟೋ ಫ್ರೇಮಿನ ಮೇಲಿನ ಕಲಾ ರಚನೆ.
PHOTO FRAME.



ಸಿಂಹಾಸನದ ಒಂದು ಭಾಗ.
PART OF THE SIMHASANA.



ಹಿರಣ್ಯಪ್ಪನವರು ಕೆತ್ತಿದ ಶ್ರೀಗಂಧದ ಬೀಸಣಿಗೆ.
GANDHADA BEESANEGE.



ಸಿಂಹಾಸನ
SIMHASANA.



ದಿ॥ ಮೂಡುಗೋಡು ಹಿರಣ್ಯಪ್ಪನವರು.
MOODUGODU HIRANYAPPA.

GUDIGARAS

